ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಆಗಸ್ಟ್ -೨೦೧೬ ಸಂಚಿಕೆ - ೧

ರಾಜಕಾರಣಾಧಾರಿತ ಜನ ಪರ್ಯಾಯವೇ, ಲೋಕಶಕ್ತಿಯೇ?

*

ಕೋಮು ಸಾಮರಸ್ಯ ಕೆಲವು ಸಲಹೆ

*

ಫಲತ್ಯಾಗಿಗೆ ಅನಂತಫಲ

*

ಸಂಪೂರ್ಣಕ್ರಾಂತಿ; ಒಂದು ಸಂದೇಶ

ಜನಪದ ವಿಚಾರದಲ್ಲಿ

ಆಗಸ್ಟ್- ೨೦೧೬

೧. ರಾಜಕಾರಣಾಧಾರಿತ ಜನ ಪರ್ಯಾಯವೇ ಅಥವಾ ಲೋಕಶಕ್ತಿಯೇ? ಪುಟ – ೨–೬

ಯಾವುದೆ ಪರ್ಯಾಯ ವ್ಯವಸ್ಥೆಯ ಬಗ್ಗೆ ಚಿಂತನೆ ನಡೆದರೆ ಅದು ವಿಶಿಷ್ಟ ರೀತಿಯಲ್ಲಿ ನಡೆಯಬೇಕೆ ವಿನಃ ತುಳಿದ ದಾರಿಯಲ್ಲಿಯೇ ನಡೆಯ ಕೂಡದು. ವ್ಯವಸ್ಥೆಯನ್ನು ಕೆಡಿಸುವ ಶಾಸನ ವ್ಯವಸ್ಥೆ ಮತ್ತು ಧರ್ಮ ವ್ಯವಸ್ಥೆಗಳ ಮೇಲೆ ನಿಯಂತ್ರಣ ಇಟ್ಟುಕೊಳ್ಳಬಹುದಾದ ಪ್ರಬಲ ಲೋಕಶಕ್ತಿಯ ನಿರ್ಮಾಣಕ್ಕಾಗಿ ಚಿಂತಿಸುವದು ಒಳ್ಳೆಯದೆಂಬ ಆಶಯ ಈ ಲೇಖನದು.

– ಸುರೇಂದ್ರ ಕೌಲಗಿ

೨. ಅಂಬೇಡ್ಕರ್ ಮತ್ತು ಗಾಂಧೀ ವಾಗ್ವಾದ ಒಂದು ಗ್ರಹಿಕೆ ಪುಟ – ೭–೯

ಗಾಂಧೀ ಮತ್ತು ಅಂಬೇಡ್ಕರರ ಸಾಧ್ಯ ಒಂದೆ ಆಗಿದ್ದರೂ ಮಾರ್ಗಗಳು ಭಿನ್ನವಾಗಿದ್ದವು. ಅದನ್ನು ತಪ್ಪು ಭಾವಿಸಿ ಅವರೀರ್ವರು ಪರಿಸ್ಪರ ವಿರೋಧಿಗಳೆಂಬ ಬಿಂಬಿಸುವ ಪ್ರಯತ್ನಕ್ಕೆ ಉತ್ತರವಾಗಿ ಈ ಲೇಖನ.

– ರಾಜ್‌ಮೋಹನ್ ಗಾಂಧೀ

೩. ಮೋದಿ ಸರ್ಕಾರದ ಎರಡು ವರ್ಷ; ಒಂದು ಅಭಿಪ್ರಾಯ ಪುಟ – ೧೦–೧೨

ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾದವು. ಸರ್ಕಾರದ ಸಾಧನೆ ಕುರಿತು ಒಂದು ಅಭಿಪ್ರಾಯ ಇದು.

– ಸುರೇಂದ್ರ ಕೌಲಗಿ

೪. ಕೋಮು ಸಾಮರಸ್ಯಕ್ಕಾಗಿ ಕೆಲವೊಂದು ಸಲಹೆಗಳು ಪುಟ – ೧೩–೧೭

ಕೋಮು ಸಾಮರಸ್ಯದ ವಿಚಾರ ಮರೀಚಿಕೆಯಾಗುತ್ತಿರುವ ಸಂದರ್ಭದಲ್ಲಿ ಆ ನಿಟ್ಟಿನತ್ತ ಸಾಮರಸ್ಯದ ಕೆಲವು ಸೂಚನೆಗಳು ಈ ಲೇಖನದಲ್ಲಿವೆ.

– ಯತಿರಾಜ್ ಬ್ಯಾಲಹಳ್ಳಿ

೫. ಫಲತ್ಯಾಗಿಗೆ ಅನಂತಫಲ ಪುಟ – ೧೮ –೨೨

ಯಾವುದೆ ಕೆಲಸವನ್ನು ಫಲಾಪೇಕ್ಷ ಇಲ್ಲದೆ ಮಾಡಬೇಕು. ಫಲದ ಬಗ್ಗೆ ನಿರ್ಣಯಿಸುವವನು ಆ ಭಗವಂತನೆಂಬ ಗೀತೆಯ ಸೂಕ್ತಿಯ ವಿವರಣೆ ಈ ಲೇಖನದಲ್ಲಿದೆ.

– ವಿನೋಬಾ

೬. ಸಂಪೂರ್ಣಕ್ರಾಂತಿ ದಿನದ ಸ್ಮರಣೆಯಲ್ಲಿ ಪುಟ – ೨೩–೨೪

– ಮಹಾದೇವ ವಿದ್ರೋಹಿ

೭. ಚಿಂತನೆಗೊಂದು ಸಂಗತಿ ಪುಟ – ೨೫

೮. ಜನಪದ ಸೇವಾ ಟ್ರಸ್ಟ್ ಸಮಾಚಾರ ಪುಟ – ೨೬

೯. ಸನ್ಮಾನ್ಯರಿಂದ ಪುಟ – ೨೭–೩೧

೧೦. ನಾಲ್ಕೂ ನಿಟ್ಟಿನಿಂದ ಪುಟ – ೩೨

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಆಗಸ್ಟ್ - ೨೦೧೬
ಸಂಪುಟ - ೧೭
ಸಂಚಿಕೆ - ೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಮಾನವ ಜನ್ಮ

ಮಾನವ ಜನ್ಮ ದೊಡ್ಡದು
ಇದ ಹಾನಿ ಮಾಡಲು ಬೇಡಿ
ಹುಚ್ಚಪ್ಪಗಳಿರಾ
ಕಣ್ಣು ಕೈ ಕಾಲು ಕಿವಿ ನಾಲಿಗೆ
ಇರಲಿಕ್ಕೆ
ಮಣ್ಣು ಮುಕ್ಕಿ ಮರುಳಾಗುವವರೇನೋ
ಹೆಣ್ಣು ಮಣ್ಣಿಗಾಗಿ
ಹರಿಯ ನಾಮಾಮೃತ
ಉಣ್ಣದೆ ಉಪವಾಸ
ಇರುವರೇ ಖೋಡಿ
ಕಾಲನ ದೂತರು
ಕಾಲ್ಪಿಡಿದೆಳೆವಾಗ

ತಾಳು ತಾಳೆಂದರೆ
ತಾಳುವರೇ
ದಾಳಿಬಾರದ ಮುನ್ನ
ಧರ್ಮವ ಗಳಿಸಿರೋ
ಹಾಳು ಸಂಸಾರ
ಸುಳಿಗೆ ಸಿಕ್ಕಲೂ ಬೇಡಿ
ಏನು ಕಾರಣ
ಯದುಪತಿಯನು ಮರೆತಿರಿ
ಧನ ಧಾನ್ಯ ಸತಿ
ಸುತರು ಕಾಯುವರೇ
ಇನ್ನಾದರೂ ಏಕೋ ಭಾವದಿ
ಭಜಿಸಿರೋ
ಚೆನ್ನ ಶ್ರೀ ಪುರಂದರ ವಿಠಲ ರಾಯನ॥

– ಶ್ರೀ ಪುರಂದರದಾಸರು

ರಾಜಕಾರಣಾಧಾರಿತ ಜನಪರ್ಯಾಯವೆ ಅಥವಾ ಲೋಕಶಕ್ತಿಯೆ?

– ಸುರೇಂದ್ರ ಕೌಲಗಿ

ಇತ್ತೀಚೆಗೆ ಧಾರವಾಡದಲ್ಲಿ ಪರ್ಯಾಯ ರಾಜಕೀಯ ವ್ಯವಸ್ಥೆಯ ಬಗ್ಗೆ ಚಿಂತನೆ ಮಾಡಲು ಸಮಾವೇಶವೊಂದು ನಡೆಯಿತು. ಆ ಚಿಂತನಾ ಸಮಾವೇಶವನ್ನು ಜನಸಂಗ್ರಾಮ ಪರಿಷತ್, ಜನಶಕ್ತಿ, ಕರ್ನಾಟಕ ಸರ್ವೋದಯ ಪಕ್ಷ ಮುಂತಾದ ಜನಪರ ಹೋರಾಟದ ಸಂಘಟನೆಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಜೊತೆಗೂಡಿ ಆ ಸಮಾವೇಶವನ್ನು ಆಯೋಜಿಸಿದ್ದರು. ಎರಡು ದಿನ ಚಿಂತನಾ ಸಭೆ ನಡೆಯಿತು. ಸಮಾವೇಶದಲ್ಲಿ ಜನಪರ್ಯಾಯ ಸಾಧ್ಯತೆಗಳ ಬಗ್ಗೆ ಚರ್ಚೆನಡೆಯಿತು. ಆ ಚರ್ಚೆಯು ಫಲವಾಗಿ ಮುಖ್ಯವಾದ ತೀರ್ಮಾನವೊಂದನ್ನು ಕೈಗೊಳ್ಳಲಾಯಿತು. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳಿಗಾಗಿ ದೇಶದಲ್ಲಿರುವ ಎಲ್ಲ ಪ್ರಗತಿಪರ ಸಂಘಟನೆಗಳು ಮತ್ತು ಹೋರಾಟಗಾರರು ಒಗ್ಗೂಡಿ ಹೋರಾಡಲು ಮಹಾಮೈತ್ರಿಯೊಂದನ್ನು ರಚಿಸಲು ತೀರ್ಮಾನಿಸಲಾಯಿತು. ಈ ಮಹಾಮೈತ್ರಿಯ ಉದ್ದೇಶ ಸಮಾನತೆ, ಸ್ವಾತಂತ್ರ್ಯ. ನ್ಯಾಯ ಮತ್ತು ಭ್ರಾತೃತ್ವ ಆಧರಿಸಿ ಪ್ರಜಾಪ್ರಭುತ್ವ ಸ್ಥಾಪಿಸುವ ಪ್ರಯತ್ನದ ಮೂಲಕ ಮತಾಂಧ ಜಾತಿವಾದಿ ಮತ್ತು ಭ್ರಷ್ಟಶಕ್ತಿಗಳನ್ನು ಹಿಮ್ಮೆಟ್ಟಿಸಲು ಈ ಮಹಾಮೈತ್ರಿ ಹೋರಾಟ ಮಾಡುವದು. ಈ ಮಹಾಮೈತ್ರಿಯನ್ನು ರಾಷ್ಟ್ರಮಟ್ಟದಲ್ಲಿ ರಚಿಸುವುದಕ್ಕಾಗಿ ಮೂರು ತಿಂಗಳ ಕಾಲಾವಕಾಶ ಇಟ್ಟುಕೊಳ್ಳಲಾಗಿದೆ. ಸಾಧ್ಯವಾದಷ್ಟು ಸಮಾನ ಮನಸ್ಕರನ್ನು ಒಗ್ಗೂಡಿಸಲು ಸಮಾವೇಶ ನಿರ್ಧರಿಸಿತು.

ಸಮಾವೇಶದಲ್ಲಿ ಪರ್ಯಾಯದ ಬಗ್ಗೆ ಚಿಂತನೆ ಮಾಡುವಾಗ ಇಂದಿನ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷಗಳನ್ನು ಮಾತ್ರ ಗಮನದಲ್ಲಿರಿಸಿಕೊಂಡು ಮತ್ತು ಅವುಗಳಿಂದ ದೇಶದಲ್ಲಿ ಉಂಟಾಗಿರುವ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟುಗಳಿಗೆ ತಡೆಯೊಡ್ಡುವುದಕ್ಕಾಗಿ ಹಾಗೂ ಅವುಗಳಿಗೆ ಪರ್ಯಾಯವಾಗಿ ಹೊಸ ಮಹಾಮೈತ್ರಿಯನ್ನು ಸ್ಥಾಪಿಸಲು ತೀರ್ಮಾನಿಸಿದಂತೆ ತೋರುತ್ತದೆ. ದೇಶದಲ್ಲಿರುವ ಎಡಪಂಥೀಯ ವಿಚಾರಗಳ ಸಂಘಟನೆಗಳನ್ನು ಮುಖ್ಯವಾಗಿ ಮಾವೋ ಮತ್ತು ಲೆನಿನ್ ವಿಚಾರಧಾರೆಯ

ಎಡಪಂಥೀಯ ಸಂಘಟನೆಗಳನ್ನು ಹಾಗೂ ದೇಶದಲ್ಲಿ ವ್ಯಾಪಿಸುತ್ತಿರುವ ನಕ್ಸಲವಾದಿ ಸಂಘಟನೆಳನ್ನು ಮತ್ತು ಇಸ್ಲಾಮಿಕ್ ಸ್ಟೇಟ್‌ನಂಥ ಉಗ್ರಗಾಮಿ ಸಂಘಟನೆಗಳನ್ನು ಗಮನದಲ್ಲಿ ಇರಿಸಿಕೊಂಡಂತೆ ತೋರಲಿಲ್ಲ.

ಜನಾಧಾರಿತ ಪರ್ಯಾಯ ವ್ಯವಸ್ಥೆಯನ್ನು ಹುಟ್ಟುಹಾಕಲು ಪ್ರಯತ್ನಿಸುವುದಾದರೆ ಅದು ಕೇವಲ ರಾಜಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳ್ಳುವುದಾದರೆ ಅಂಥ ಪರ್ಯಾಯ ತನ್ನ ಉದ್ದೇಶವನ್ನು ನೆರವೇರಿಸಿಕೊಳ್ಳಲಾರದು. ಪರ್ಯಾಯವಾಗಿ ಆಮ್‌ಆದ್ಮಿ ಪಕ್ಷ ಕಟ್ಟಿ ಭ್ರಮ ನಿರಸನಗೊಂಡವರು ಧಾರವಾಡದ ಸಮಾವೇಶದಲ್ಲಿ ಇದ್ದರು. ಆದ್ದರಿಂದ ದೇಶದ ಮುಂದೆ ಇರಬೇಕಾದ ಮುಖ್ಯ ಚಿಂತನೆಯೆಂದರೆ ಜನಪರ ಪರ್ಯಾಯವೆಂಬುದು ಎಲ್ಲ ಭ್ರಷ್ಟ ಪರ್ಯಾಯಗಳಿಗೆ ರಾಜಕೀಯ ಪರ್ಯಾಯವೇ ಅಥವಾ ಮೂರನೇಯ ಲೋಕಶಕ್ತಿಯೇ ಎಂಬುದೆ ಆಗಿದೆ.

ರಾಷ್ಟ್ರದಲ್ಲಿಯ ಇಂದಿನ ಎಲ್ಲ ಪ್ರಕಾರದ ಸಮಸ್ಯೆಗಳಿಗೆ ರಾಜಕೀಯ ಪಕ್ಷಗಳಾಧರಿತ ರಾಜ್ಯಶಕ್ತಿ ಮತ್ತು ಆ ರಾಜ್ಯಶಕ್ತಿಯ ಕೈವಶವಾಗಿರುವ ದಂಡಶಕ್ತಿಗಳೇ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣವಾಗಿವೆ. ಜನಪರ ನೀತಿಗಳಿಗೂ, ಜನಹಿತ ವಿರೋಧಿನೀತಿಗಳಿಗೂ, ಹೆಚ್ಚುತ್ತಿರುವ ಭ್ರಷ್ಟಾಚಾರಕ್ಕೂ ಮತ್ತು ಹಿಂಸಾಚಾರಕ್ಕೂ ಈ ಎರಡು ಶಕ್ತಿಗಳೇ ಕಾರಣವಾಗಿವೆ.

ಜಗತ್ತಿನ ಮುಂದಿರುವ ಇಂದಿನ ಅತ್ಯಂತ ಜ್ವಲಂತ ಸಮಸ್ಯೆಯಾದ ತಾಪಮಾನದಲ್ಲಿಯ ಏರಿಕೆಗೂ ಹಾಗು ಪರಿಸರ ನಾಶಕ್ಕೂ ಈ ಎರಡು ಶಕ್ತಿಗಳೇ ಕಾರಣವಾಗಿವೆ. ಈಗ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವಿದೆ. ಜನತಾ ಪ್ರತಿನಿಧಿಗಳಿಂದ ಆಯ್ಕೆಯಾದ ಜನನಾಯಕರಿಂದಲೇ ದೇಶದ ಸಂವಿಧಾನ ರಚನೆಯಾಗಿದೆ. ಆದ್ದರಿಂದ ಪುನಃ ಪ್ರಜಾಪ್ರಭುತ್ವದ ಸ್ಥಾಪನೆಯ ವಿಚಾರ ಉದ್ಭವಿಸುವುದಿಲ್ಲ. ಬದಲಿಗೆ ಈಗಿನ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಲೋಪದೋಷಗಳಿದ್ದರೆ ಅದನ್ನು ಸುಧಾರಿಸುತ್ತಹೋಗುವ ಕೆಲಸವನ್ನು ಮಾತ್ರ ಮಾಡಬೇಕಾಗುತ್ತದೆ. ಅಂದರೆ ಪ್ರಜಾಪ್ರಭುತ್ವದ ಮೂಲ ದ್ರವ್ಯವೆಂದು ಪರಿಗಣಿಸಲಾಗಿರುವ ಪ್ರಜೆಗಳ ವೈಚಾರಿಕತೆಯಲ್ಲಿ ಮತ್ತು ವ್ಯವಹಾರದಲ್ಲಿ ಸುಧಾರಣೆಯಾಗುತ್ತ ಹೋಗುವುದು ಅನಿವಾರ್ಯವಾಗುತ್ತದೆ. ದೈಹಿಕವಾಗಿ ಮತ್ತು ವೈಚಾರಿಕವಾಗಿ ಆರೋಗ್ಯ ಪೂರ್ಣವಾಗಿರುವ ಪ್ರಜೆಗಳಿಂದ ಮಾತ್ರ ಪ್ರಜಾಪ್ರಭುತ್ವ ನಿಜವಾದ ಅರ್ಥದಲ್ಲಿ ಪ್ರಜೆಗಳ ಪ್ರಭುತ್ವವಾಗಿ ಹೊರಹೊಮ್ಮಲು ಸಾಧ್ಯ. ಅಂಥ ಪ್ರಜಾಪ್ರಭುತ್ವವು ಮೂರನೇಯ ಲೋಕಶಕ್ತಿಯಾಗಿ ಕಾರ್ಯನಿರ್ವಹಿಸಲು ಸಾಧ್ಯ. ಅಂದರೆ ರಾಜ್ಯಶಕ್ತಿ ಮತ್ತು ದಂಡಶಕ್ತಿಗಳ ಮೇಲೆ

ನಿಯಂತ್ರಣ ಇಟ್ಟುಕೊಂಡು ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳಲು ಸಮರ್ಥವಾಗುತ್ತದೆ. ಆದ್ದರಿಂದ ಪರ್ಯಾಯದ ವಿಷಯವಾಗಿ ದೇಶದ ಯಾವುದೇ ಭಾಗದಲ್ಲಿ ಚಿಂತನೆ ನಡೆದರೂ ತಟಸ್ಥ ಲೋಕ ಶಕ್ತಿಯ ನಿರ್ಮಾಣದ ಕಡೆಗೇ ಒತ್ತು ಕೊಡಬೇಕಾಗುತ್ತೆ. ರಾಜ್ಯಶಕ್ತಿ ಮತ್ತು ದಂಡಶಕ್ತಿಗಳು ಪ್ರಬಲವಾದಷ್ಟೂ ಹಾಗು ಮುಖ್ಯವಾದಷ್ಟೂ ಪ್ರಜಾಪ್ರಭುತ್ವ ದುರ್ಬಲಗೊಳ್ಳುತ್ತಾ, ಉದಾಸೀನಗೊಳ್ಳುತ್ತಾ ಹೋಗುತ್ತದೆ. ಪ್ರಜಾಪ್ರಭುತ್ವ ನಿಜವಾಗಿ ಪ್ರಜೆಗಳಿಂದ, ಪ್ರಜೆಗಳಿಗೋಸ್ಕರ ಇರುವಂತಾಗಬೇಕಾದರೆ ರಾಜ್ಯಶಕ್ತಿ ಮತ್ತು ದಂಡಶಕ್ತಿಗಳ ಮೇಲೆ ಪ್ರಜೆಗಳ ಅಂಕುಶ ಇರಬೇಕಾದಂಥ ಶಕ್ತಿಯೊಂದು ನಿರ್ಮಾಣವಾಗಬೇಕಾಗುತ್ತದೆ. ಇದೇ ಮೂರನೇಯ ಲೋಕಶಕ್ತಿ.

ಜನಪರವಾದ ಪರ್ಯಾಯ ವ್ಯವಸ್ಥೆಯೇ ಲೋಕಶಕ್ತಿಯಾಗಿ ಹೊರಹೊಮ್ಮುವಂತೆ ಎಲ್ಲ ಜನಾಂದೋಲಗಳ ಗುರಿಯಾಗಬೇಕಿದೆ. ಆ ಜನಾಂದೋಲನಗಳ ಗುರಿ ಕೇವಲ ರಾಜಕೀಯ ವಿಷಯಗಳನ್ನೆ ಕೇಂದ್ರವಾಗಿರಿಸಿಕೊಂಡು ಹೋರಾಟ ಮಾಡಿದಲ್ಲಿ ಅವುಗಳಿಗೆ ಯಶಸ್ಸು ದೊರೆಯುವುದು ಅಸಾಧ್ಯ. ಏಕೆಂದರೆ ಯಾವುದೇ ಒಂದು ರಾಜಕೀಯ ವಿಷಯವನ್ನು ಎತ್ತಿಕೊಂಡ ಕೂಡಲೆ ಜನತೆಯಲ್ಲಿ ಭಿನ್ನಾಭಿಪ್ರಾಯಗಳು ಮೂಡುತ್ತವೆ; ಅನೇಕ ಅಭಿಪ್ರಾಯಗಳು ರೂಪಗೊಳ್ಳುತ್ತವೆ. ಆಗ ಸಂಘಟನೆಯಲ್ಲಿಯ ಶಕ್ತಿ ಕ್ಷೀಣವಾಗುತ್ತದೆ ಮತ್ತು ಹೋರಾಟದ ಆಂತರಿಕ ಶಕ್ತಿ ದುರ್ಬಗೊಳ್ಳುತ್ತದೆ. ಇದಕ್ಕೆ ಉದಾಹರಣೆಯಾಗಿ ಕರ್ನಾಟಕ ರಾಜ್ಯದ ರೈತ ಚಳುವಳಿಯನ್ನು ಗಮನಿಸಬಹುದು. ರೈತ ಚಳುವಳಿ ಪ್ರಾರಂಭವಾದಾಗ ಅದು ಯಾವುದೇ ಪಕ್ಷದ ಬಣ್ಣವನ್ನು ತನ್ನ ಮೈಗೆ ಅಂಟಿಸಿಕೊಂಡಿರಲಿಲ್ಲ. ರೈತರಿಂದ ರೈತರಹಿತಕ್ಕಾಗಿ ನಡೆಯುವ ಚಳವಳಿ ಅದಾಗಿತ್ತು. ೧೯೮೦ ನಂತರ ಅದು ರಾಜಕೀಯ ಪಕ್ಷವಾಗಿ ರೂಪುಗೊಳ್ಳಲು ಪ್ರಯತ್ನಿಸುತ್ತಾ ಹೋದಂತೆ ಅದರ ಸಂಘಟನಾಶಕ್ತಿ ಮತ್ತು ಆತ್ಮಿಕಶಕ್ತಿ ಕಡಿಮೆಯಾಗುತ್ತಾ ಬಂತು. ಜೊತೆಗೆ ಅದರಲ್ಲಿ ಭಿನ್ನಾಭಿಪ್ರಾಯಗಳೂ ಹುಟ್ಟಿಕೊಂಡವು. ೧೯೮೯ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ೨೨೪ಸ್ಥಾನಗಳ ಪೈಕಿ ೧೧೧ ಸ್ಥಾನಗಳಿಗೆ ರೈತ ಸಂಘದ ಅಭ್ಯರ್ಥಿಗಳು ಸ್ಪರ್ಧಿಸಿದರಾದರೂ ಕೇವಲ ಎರಡು ಕ್ಷೇತ್ರಗಳಲ್ಲಿ ಮಾತ್ರ ರೈತ ಸಂಘದ ಅಭ್ಯರ್ಥಿಗಳು ಗೆದ್ದರು! ಬಾಬಾಗೌಡ ಪಾಟೀಲರೇ ಎರಡು ಸ್ಥಾನಗಳಲ್ಲಿ ಗೆದ್ದರು. ಅವರು ಒಂದು ಸ್ಥಾನಕ್ಕೆ ರಾಜಿನಾಮೆ ಕೊಟ್ಟು, ನಂಜುಂಡಸ್ವಾಮಿಯವರನ್ನು ಗೆಲ್ಲಿಸಿದರು. ಮುಂದೆ ೧೯೯೪ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಎಸ್.ಪುಟ್ಟಣ್ಣಯ್ಯ ಒಬ್ಬರೆ ಗೆದ್ದರು.

ಇನ್ನೊಂದು ಗಮನಿಸಬೇಕಾದ ಉದಾಹರಣೆ ಮೇಧಾ ಪಾಟ್ಕರ್, ಅರುಣರಾಯ್. ಯೋಗೇಂದ್ರ ಯಾದವ್, ಕಿಶನ್ ಪಟ್ನಾಯಕ್ ಮುಂತಾದ ಹೋರಾಟಗಾರರೆಲ್ಲ ಸೇರಿ ಮಧ್ಯಪ್ರದೇಶದಲ್ಲಿ "ಸಮಾಜವಾದಿ ಜನಪರಿಷತ್" ಎಂಬ ಸಂಘಟನೆ ಮಾಡಿ ಪರ್ಯಾಯ ರಾಜಕಾರಣಕ್ಕಾಗಿ ಹೋರಾಟ ಮಾಡಬೇಕೆಂದು ನಿರ್ಧರಿಸಿ ೨೦೦೪ ರಲ್ಲಿ ಅಲ್ಲಿಯ ವಿಧಾನ ಸಭೆಯ ಚುನಾವಣೆಯಲ್ಲಿ ಸಮಾಜವಾದಿ ಜನಪರಿಷತ್ ಸ್ಪರ್ಧಿಸಿತು. ನಾಲ್ಕು ಅಭ್ಯರ್ಥಿಗಳನ್ನು ಅದು ಕಣಕ್ಕೆ ಇಳಿಸಿತು. ಅವರೆಲ್ಲರು ಸೋತು ತಮ್ಮ ಠೇವಣಿಯನ್ನು ಕಳೆದುಕೊಂಡರು!

ಆಮ್‌ಆದ್ಮಿ ಪಕ್ಷದಿಂದ ಹೋರಬಂದು "ಸ್ವರಾಜ್ ಅಭಿಯಾನ್" ಎಂಬ ಸಂಘಟನೆ ರಚಿಸಿದ ಯೋಗೇಂದ್ರ ಯಾದವ ಈಗ ಆ ಸಂಘಟನೆಗೆ ರಾಜಕೀಯ ಪಕ್ಷದ ಸ್ವರೂಪ ಕೊಡಲು ಪ್ರಯತ್ನಿಸುತ್ತಿದ್ದಾರೆ. ೨೦೧೬ ಜುಲೈ ೩೧ ರ ವೇಳೆಗೆ ಅದನ್ನು ರಾಜಕೀಯ ಪಕ್ಷವೆಂದು ಘೋಷಣೆ ಮಾಡಲಿದ್ದಾರೆ. ಸ್ವರಾಜ್ ಅಭಿಯಾನ್ ಸಂಘಟನೆ ರಾಜಕೀಯ ಪಕ್ಷವಾಗುವುದು ಬೇಡ, ಸಂಘಟನೆಯನ್ನು ಬಲಗೊಳಿಸೋಣ ಎಂಬ ಅಭಿಪ್ರಾಯ ಆ ಸಂಘಟನೆಯ ಕೆಲವರಿಗೆ ಇರುವುದಾದರೂ ಅದು ಅಂತಿಮವಾಗಿ ರಾಜಕೀಯ ಪಕ್ಷವಾಗಿ ರೂಪಾಂತರಗೊಳ್ಳುವುದರಲ್ಲಿ ಸಂದೇಹವಿಲ್ಲ. ರಾಜಸ್ತಾನ್ ಮತ್ತು ಪಂಜಾಬ್ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಅದು ಸ್ಪರ್ಧಿಸಬಹುದಾದರೂ ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಮತ್ತು ಮಧ್ಯಪ್ರದೇಶದ ಸಮಾಜವಾದಿ ಜನಪರಿಷತ್ತಿಗೆ ಆದ ಗತಿಯೇ ಸ್ವರಾಜ್ ಅಭಿಯಾನ ಸಂಘಟನೆಗೂ ಆದಲ್ಲಿ ಯಾರೂ ಅಳಬೇಕಾಗಿಲ್ಲ.

೧೯೭೪ರಲ್ಲಿ ಲೋಕನಾಯಕ ಜಯಪ್ರಕಾಶ ನಾರಾಯಣರು ಯುವಶಕ್ತಿಯ ಬಲದಿಂದ ಸಂಪೂರ್ಣ ಕ್ರಾಂತಿಗಾಗಿ ದೇಶಕ್ಕೆ ಆಹ್ವಾನಕೊಟ್ಟರು. ಅಂದಿನ ರಾಜ್ಯಶಕ್ತಿ ಪ್ರಜಾಪ್ರಭುತ್ವಕ್ಕೆ ಕಂಟಕವಾದುದನ್ನು ಗಮನಿಸಿ ಆ ಶಕ್ತಿಯನ್ನು ದುರ್ಬಲಗೊಳಿಸಿ ಪುನಃ ದೇಶದಲ್ಲಿ ಪ್ರಜಾಶಕ್ತಿ ಪ್ರಕಟಗೊಳ್ಳುವಂತೆ ಜಯಪ್ರಕಾಶ್ ಮಾಡಿದರು. ಸಂಪೂರ್ಣ ಕ್ರಾಂತಿಯ ಕಹಳೆ ಮೊಳಗಿತಾದರೂ ಅವರು ಬಯಸಿದ್ದ "ಸಂಪೂರ್ಣಕ್ರಾಂತಿ ಮಾತ್ರ ಆಗಲಿಲ್ಲ". ಅದು ಇಂದಿಗೂ ಅಪೂರ್ಣ ಕ್ರಾಂತಿಯಾಗಿಯೇ ಉಳಿದಿದೆ. ಏಕೆಂದರೆ ಸಂಪೂರ್ಣ ಕ್ರಾಂತಿಯ ವಿಚಾರಗಳನ್ನು ಅನುಷ್ಠಾನಕ್ಕೆ ತರುವುದಕಾಗಿ ಜನಪರ ಸಂಘಟನೆಯ ಹೆಸರಿನಲ್ಲಿ "ಜನತಾಪಕ್ಷ" ಎಂದು ರಾಜಕೀಯ ಪಕ್ಷವಾಗಿ ಹೊರಹೊಮ್ಮಿತು. ಆದರೆ ಅದು ಆಂತರಿಕ ಸಮಸ್ಯೆಗಳಿಂದಾಗಿ ರಾಜಕೀಯ ಪಕ್ಷವಾಗಿ ಬಹಳಕಾಲ ಉಳಿಯಲಿಲ್ಲ. ಬಲವಾಗಿ

ರೂಪುಗೊಂಡಿದ್ದ ಜನಶಕ್ತಿಯೊಂದು ರಾಜಕೀಯ ಕ್ಷೇತ್ರದ ಗೋಂಡಾರಣ್ಯದಲ್ಲಿ ಕಳೆದುಹೋಯಿತು.

ಆನಂತರ ಭ್ರಷ್ಟಾಚಾರದ ವಿರುದ್ಧ ಹೂಡಲ್ಪಟ್ಟ ಅಣ್ಣಾಹಜಾರೆಯುವರ ಜನಾಂದೋಲನವೂ ಸಹ ಅವರ ಇಚ್ಛೆಯ ವಿರುದ್ಧವಾಗಿ ರಾಜಕೀಯ ಪಕ್ಷದಲ್ಲಿ ರೂಪಾಂತರಗೊಂಡು ತಡವರಿಸುತ್ತಿದೆ. ಭ್ರಷ್ಟಾಚಾರ ವಿರುದ್ಧದ ಆಂದೋಲನ ಹೇಳಹೆಸರಿಲ್ಲವಾಗಿದೆ.

ಸುಮಾರು ೧೫೦ ವರ್ಷಗಳ ಹಿಂದೆ ಜಾಗತಿಕ ಕಾರ್ಮಿಕರನ್ನು, ದುಡಿಮೆಗಾರರನ್ನು ಮತ್ತು ಶೋಷಿತರನ್ನು ಸಂಘಟಿಸಿ ಅವರ ಕೈಗೆ ರಾಜ್ಯಶಕ್ತಿ ಬರುವಂತೆ ಮಾಡಬೇಕೆಂಬ ಮಹದೋದ್ದೇಶದಿಂದ ಸಾಮ್ಯವಾದಿ ಪಕ್ಷ (ಕಮ್ಯುನಿಸ್ಟ್ ಪಕ್ಷ) ಸ್ಥಾಪಿತವಾಯಿತು. ರಾಜ್ಯಶಕ್ತಿಯ ಮೂಲಕ ರಾಜ್ಯಶಕ್ತಿಯೇ ವಿಸರ್ಜನೆಗೊಂಡು ನಿಜವಾದ ಅರ್ಥದಲ್ಲಿ ಪ್ರಜೆಗಳಿಂದ ಪ್ರಜೆಗಳಿಗಾಗಿ ನಡೆಯುವ ಪ್ರಜಾಪ್ರಭುತ್ವದ ಸ್ಥಾಪನೆಯ ಅದರ ಕನಸು ಈ ವರಗೂ ನನಸಾಗಲೇ ಇಲ್ಲ! ಬದಲಿಗೆ ಸಾಮ್ಯವಾದಿ ಸರ್ಕಾರಗಳು ಉರುಳಿಹೋದವು. ಈಗ ಅತಿಯಾಗಿ ಜಗತ್ತಿನಲ್ಲೆಲ್ಲ ಬಂಡವಾಳವಾದ ಹಬ್ಬಿಕೊಂಡಿರುವುದರಿಂದ ಮತ್ತು ಪ್ರತಿಯೊಬ್ಬ ವ್ಯಕ್ತಿ ಅವನು ಕಾರ್ಮಿಕನಾಗಿರಲಿ. ಶೋಷಿತನಾಗಿರಲಿ ಬಂಡವಾಳಶಾಹಿ ಮನೋವೃತ್ತಿಯನ್ನೇ ಬೆಳೆಸಿಕೊಂಡಿರುವುದರಿಂದ ಬಂಡವಾಳವಾದವನ್ನು ಹಿಮ್ಮೆಟ್ಟಿಸುವಂಥ ಶಕ್ತಿ ಮಾರ್ಕ್ಸ್ ಕಮ್ಯೂನಿಸ್ಟ ಪಕ್ಷಕ್ಕಾಗಲಿ, ಲೆನಿನ್-ಮಾವೊ ವಿಚಾರದ ಪಕ್ಷಕ್ಕಾಗಲಿ ಇಲ್ಲವಾಗಿದೆ. ಅಲ್ಲದೆ ಈಗಿರುವ ಕಮ್ಯೂನಿಸ್ಟ್ ವಿಚಾರಧಾರೆಯು ದೇಶಗಳಾದ ರಷ್ಯಾ ಮತ್ತು ಚೀನಾ ದೇಶಗಳು ಬಂಡವಾಳವಾದಕ್ಕೆ ದಾರಿಮಾಡಿ ಕೊಡುತ್ತಿವೆ. ಸೈನ್ಯಶಕ್ತಿಗೆ ಮತ್ತು ದಂಡಶಕ್ತಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿವೆ. ಪರೋಕ್ಷವಾಗಿ ಹಿಂಸೆಯನ್ನು ಬೆಂಬಲಿಸುತ್ತಿವೆ.

ಜನಪರ ಸಂಘಟನೆಯ ಮೂಲಕ ಪ್ರಚಲಿತ ಸಮಾಜಕ್ಕೆ ಪರ್ಯಾಯವಾಗಿ ಹೊಸ ವ್ಯವಸ್ಥೆಯೊಂದನ್ನು ರೂಪಿಸಲು ಬಯಸುವ ಮತ್ತು ಹೆಣಗುವ ಜನಾಂದೋಲನಗಳ ನಾಯಕರು "ಇಂದು ನಮಗೆ ಬೇಕಿರುವುದು ರಾಜಕಾರಣಾಧಾರಿತ ಜನಪರ್ಯಾಯವೇ ಲೋಕಶಕ್ತಿಯೇ" ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವುದು ಅಗತ್ಯವಾಗಿದೆ. ●

ಅಂಬೇಡ್ಕರ-ಗಾಂಧೀ ವಾಗ್ವಾದ: ಒಂದು ಗ್ರಹಿಕೆ

ಅನುವಾದ - ಎನ್.ಎಸ್.ಶಂಕರ ಲೇ:- ರಾಜಮೋಹನ ಗಾಂಧೀ

(ದೇಶದ ವಿವಾದತ್ಮಕ ವಿಷಯಗಳ ಚಿಂತಕರಾದ ಅರುಂಧತಿರಾಯ್ ಅವರು **The doctor and the saint** (ಡಾಕ್ಟರ ಮತ್ತು ಸಂತ) ಎಂಬ ಪುಸ್ತಕ ತುಂಬ ವಿವಾದ ಸೃಷ್ಟಿಸಿತು. ಅಂಬೇಡ್ಕರ ಮತ್ತು ಗಾಂಧೀಜಿಯವರ ಮೂಲ ವಿಚಾರಗಳ ಬಗ್ಗೆ ಇಬ್ಬರಿಗೂ ಸರಿಯಾದ ನ್ಯಾಯ ಕೊಡದೆ ಗಾಂಧೀಜಿಯವರನ್ನು ತಪ್ಪಿತ ಸ್ಥಾನದಲ್ಲಿ ನಿಲ್ಲಿಸುವಂತ ವಿಚರಗಳೇ ಅಧಿಕವಾಗಿದ್ದರಿಂದ ಆ ಪುಸ್ತಕ ಹೆಚ್ಚಿನ ವಿವಾದಕ್ಕೆ ಒಳಗಾಯಿತು. ಆ ಸಂದರ್ಭದಲ್ಲಿ ಗಾಂಧಿಯವರ ಮೊಮ್ಮಗ ಮತ್ತು ಚಿಂತಕರು ಆದ ರಾಜಮೋಹನ ಗಾಂಧಿಯವರು ಅರುಂಧತಿ ರಾಯ್ ಗಾಂಧಿಯವರ ಬಗ್ಗೆ ಸೃಷ್ಟಿಸಿದ್ದ ತಪ್ಪು ಅಭಿಪ್ರಾಯಗಳನ್ನು ಸರಿಪಡಿಸುವಂತೆ ಮಾಡಿದರು. ರಾಜಮೋಹನ ಗಾಂಧಿಯವರು ಅದಕ್ಕೆ ಸಂಭಂದಿಸಿದ ವಾಸ್ತವಿಕ ವಿಚಾರಗಳನ್ನು ತಮ್ಮ "ಸ್ವಾಂತ್ರ್ಯಮತ್ತು ಸಾಮಾಜಿಕ ನ್ಯಾಯ" ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ಇಲ್ಲಿ ಮೂಲ ಲೇಖಕರ ಮತ್ತು ಅನುವಾದಕರ ಅಭಿಪ್ರಯಗಳನ್ನು ಕೊಡುವುದರ ಮೂಲಕ ಪುಸ್ತಕದ ಆಶಯ ತಿಳಿಸಲಾಗಿದೆ. ಕನ್ನಡ ಅವತರಣಿಕೆ ಇನ್ನೂ ಬಿಡುಗಡೆಗೊಂಡಿಲ್ಲ -ಸಂ)

ಅನುವಾದಕನ ಅನಿಸಿಕೆ:

ಅಂಬೇಡ್ಕರ್ ಮತ್ತು ಗಾಂಧೀಜಿ ನಡುವಣ ವಾಗ್ವಾದ, ಸ್ವತಂತ್ರ ಭಾರತದ ಅತಿ ಮಹತ್ವದ ಕಗ್ಗಂಟುಗಳಲ್ಲಿ ಒಂದಿರಬೇಕು. ಒಂದು ಲೆಕ್ಕಕ್ಕೆ ಇದು ಎಂದೂ ಮುಗಿಯದ ವಿವಾದವೇನೋ ಎಂದು ಅನ್ನಿಸಿದೆ. ಅದರಲ್ಲೂ ೧೯೩೨ರ ಪುಣೆ ಒಪ್ಪಂದವನ್ನೇ ಕೇಂದ್ರವಾಗಿ ಮಾಡಿಕೊಂಡು, ಅಂಬೇಡ್ಕರ್ ಮತ್ತು ಗಾಂಧೀಜಿಯವರನ್ನು ಎದುರುಬದುರು ಪಾಳೆಯಗಳಲ್ಲಿ ನಿಲ್ಲಿಸಿ ಕೂಗಾಡುವ ಪ್ರವೃತ್ತಿ ಅದೇಕೋ ಈತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಲೇ ನಡೆದಿದೆ. ಅವರಿಬ್ಬರ ನಡುವೆ ಹಗೆತನ ಹುಟ್ಟುಹಾಕಿ ಸ್ವಾಂತಂತ್ರ್ಯದ ಆಶಯ ಹಾಗೂ ಸಾಮಾಜಿಕ ನ್ಯಾಯದ ಕಾಳಜಿ ಇವೆರಡನ್ನೂ ಪರಸ್ಪರ ವಿರುದ್ಧ ಗುರಿಗಳೆಂದು ಬಿಂಬಿಸಲಾಗಿದೆ; ಕಾನ್ಶಿರಾಂ ಅವರ ಬಹುಜನ ಸಮಾಜ ಪಕ್ಷದ ರಾಜಕೀಯ ಪ್ರಯೋಗ ಯಶಸ್ವಿಯಾದ ಮೇಲಂತೂ ಗಾಂಧೀಜಿಯನ್ನು ದಲಿತವಿರೋಧಿ, ಮನುವಾದಿ ಎಂದು ಬಿಂಬಿಸುವ ಪ್ರಯತ್ನಗಳಿಗೆ ದೊಡ್ಡ ಗಂಟಲು ಬಂದಿದೆ. ಇದರ ಒಳಮರ್ಮವೇನೋ ನನಗಂತೂ ಅರ್ಥವಾಗಿಲ್ಲ.

ಇದೇ ಧಾಟಿಯಲ್ಲಿ ವಾದಿಸುವ ತಾತ್ವಿಕ ಮೊಂಡರು ನನ್ನ ಗೆಳೆಯರಲ್ಲೂ ಹಲವರಿದ್ದಾರೆ. ನಾನೂ ಅವರೊಂದಿಗೆ ಎಷ್ಟೋ ಬಾರಿ ಚರ್ಚಿಸಿ ನೋಡಿದ್ದೇನೆ.

‘ನನ್ನ ಮೂಗಿನ ನೇರಕ್ಕೆ’ ನನ್ನ ವಾದಗಳನ್ನು ಅವರ ಮುಂದೆ ಮಂಡಿಸಿಯೂ ಇದ್ದೇನೆ. ಜಾತಿ ಅನ್ಯಾಯದ ಪ್ರಶ್ನೆಯು ನಾಡಿನ ಸ್ವಾತಂತ್ರ್ಯ ಹೋರಾಟಕ್ಕೆ ನೇರವಾಗಿ ಸಂಬಂಧಪಟ್ಟ ವಿಷಯ ಆಗಿರಲಿಲ್ಲವಾದರೂ, ಅಂಬೇಡ್ಕರ್ ಇನ್ನೂ ಸಾರ್ವಜನಿಕ ಜೀವನವನ್ನು ಪ್ರವೇಶಿಸುವ ಮುನ್ನವೇ, ಗಾಂಧೀಜಿ ಅಸ್ಪೃಶ್ಯತೆ ವಿಚಾರದಲ್ಲಿ ರಾಷ್ಟ್ರದ ಆತ್ಮಸಾಕ್ಷಿಯನ್ನು ಕೆದಕಿದರು. ಶತಮಾನಗಳ ಕಾಲ ಹಿಂದೂಧರ್ಮ ಯಾವ ಎಗ್ಗೂಸಿಗ್ಗೂ ಇಲ್ಲದೆ ಆಚರಿಸಿಕೊಂಡು ಬಂದಿದ್ದ ಅಸ್ಪೃಶ್ಯತೆಯ ಪ್ರಶ್ನೆ ಸ್ವಾತಂತ್ರ್ಯದ ಹೊಸ್ತಿಲಲ್ಲಿದ್ದ ರಾಷ್ಟ್ರದ ಕೇಂದ್ರ ಕಾಳಜಿಯಾದದ್ದು ಗಾಂಧೀಜಿಯಿಂದಾಗಿ.

ಎಲ್ಲೋ ದೂರ ಹೋಗುವುದು ಬೇಡ, ಇದಕ್ಕೆ ರುಜುವಾತುಗಳು ಕನ್ನಡ ಸಾಹಿತ್ಯದಲ್ಲೇ ಸಿಕ್ಕುತ್ತವೆ. ಕುವೆಂಪು ಎಂಎ ಓದುತ್ತಿದ್ದಾಗಲೇ (೧೯೨೭ರಲ್ಲಿ) ಜಲಗಾರ ನಾಟಕ ಬರೆದರು,ಕಾರಂತರು ಚೋಮನದುಡಿ ಬರೆದರು, ಶ್ರೀರಂಗರು ಹರಿಜನ್ವಾರ ನಾಟಕ ಬರೆದರು. ಇವರಲ್ಲದೆ, ಅಷ್ಟು ಮುಖ್ಯರಲ್ಲದ ಇನ್ನೂ ಅನೇಕ ಬರಹಗಾರರು ಅಸ್ಪೃಶ್ಯತೆ ಸಮಸ್ಯೆಯನ್ನು ತಮ್ಮದೇ ರೀತಿಯಲ್ಲಿ ಎದುರಿಸಿದ್ದಾರೆ. ಜೊತೆಗೆ ಇದು ದೇಶವ್ಯಾಪಿಯಾದ ವಿದ್ಯಮಾನವಾಗಿತ್ತು ಕೂಡ. ಗಾಂಧಿ ಹೇಗೆ ಖಾದಿಯನ್ನು ರಾಷ್ಟ್ರೀಯ ಉಡುಪಾಗಿ ಮಾರ್ಪಡಿಸಿದರೋ, ಹಾಗೇ ನಿರಂತರ ಹೋರಾಟದ ಮೂಲಕ ಅಸ್ಪೃಶ್ಯತೆಯನ್ನೂ ಈ ನಾಡು ಎದುರಿಸಬೇಕಾದ ಪ್ರಧಾನ ಸವಾಲನ್ನಗಿ ಪರಿವರ್ತಿಸಿದ್ದರು... ಇದೇ ಧಾಟಿಯಲ್ಲಿ ನಾನು ಎಷ್ಟೋ ವಾದ ಹೂಡಿದ್ದೇನೆ. ಅಷ್ಟಕ್ಕೂ ಶಾಶ್ವತವಾಗಿ ಪ್ರತ್ಯೇಕ ದ್ವೀಪವಾಗಿಯೇ ಉಳಿಯುವುದು ದಲಿತರ ಗುರಿಯೂ ಆಗಿರಲಾರದು; ಸಮ ಸಮಾಜದ ಕನಸು ಕಾಣುವವರು ದಲಿತರ ಸ್ವಾಭಿಮಾನವನ್ನೂ, ಹಾಗೆಯೇ ಸವರ್ಣೀಯರ ಪಶ್ಚಾತ್ತಾಪ ಸಹಿತ ಸಹಾನುಭೂತಿಯನ್ನೂ ಒಂದೇ ಪಾಕದಲ್ಲಿ ಬೆರಸಬೇಕಾಗುತ್ತದೆ; ಅಂದರೆ, ಅಂಬೇಡ್ಕರ್ ಮತ್ತು ಗಾಂಧಿಯವರು ಒಂದೇ ವೇದಿಕೆ ಹಂಚಿಕೊಳ್ಳಬೇಕಾಗುತ್ತದೆ ಎಂದೆಲ್ಲ ಮನವರಿಕೆ ಮಾಡಲೆತ್ನಿಸಿದ್ದೇನೆ. ಆದರೂ ಆ ನನ್ನ ಗೆಳೆಯರು ಜಗ್ಗಿಲ್ಲ. ‘ಗಾಂಧೀಜಿ ದಲಿತರಿಗೆ ಪ್ರತ್ಯೇಕ ಮತಕ್ಷೇತ್ರ ಕೊಡಲು ಒಪ್ಪಲಿಲ್ಲ, ಆದ್ದರಿಂದ ಅವರು ದ್ರೋಹಿ’ ಎಂಬ ಒಂದೇ ಸೊಲ್ಲು ಹಾಡುತ್ತ ನಿಂತಿದ್ದಾರೆ.

ಈ ವಿಷಯದಲ್ಲಿ ನಾನೂ ಸಾಕಷ್ಟು ಚಿಂತಿಸಿದ್ದೇನೆ. ನನ್ನದೇ ಮಟ್ಟದಲ್ಲಿ ಬರೆದೂ ಇದ್ದೇನೆ. ಆದರೆ, ನನಗೂ ಎಲ್ಲ ಪ್ರಶ್ನೆಗಳಿಗೂ ಉತ್ತರ ಸಿಕ್ಕಿತ್ತೆಂದು ಆತ್ಮವಿಶ್ವಾಸದಿಂದ ಹೇಳಲಾರೆ.

ಇಂಥ ಸಂದಿಗ್ಧದ ಸಮಯದಲ್ಲಿ ರಾಜಮೋಹನ ಗಾಂಧಿಯವರ ಈ ಅಪೂರ್ವ ಕಿರುಹೊತ್ತಗೆ ನನ್ನ ಕೈಗೆ ಬಂತು. ಗಾಂಧಿ ಸ್ಮಾರಕ ನಿಧಿಯ ಪರವಾಗಿ ಗೆಳೆಯ ಮಗ್ಗೂರ ವಿಜಯ, ಇದನ್ನು ಕನ್ನಡಕ್ಕೆ ತರ್ಜುಮೆ ಮಾಡಿಕೊಡುವಂತೆ ಕೇಳಿದರು. ನಾನು ಈ ಕೃತಿಯನ್ನು ಓದುತ್ತಿದ್ದಂತೆಯೇ, ಇಷ್ಟೂ ಕಾಲ ಬಗೆಹರಿಯದೆ ಉಳಿದಿದ್ದ ನನ್ನ ಎಲ್ಲ ಸಂದೇಹಗಳಿಗೂ ಉತ್ತರ ಸಿಕ್ಕು ಆನಂದವಾಯಿತು. ನನ್ನ ಪ್ರಶ್ನೆಗಳೇಕೆ,

ಯಾರೇ ಎತ್ತಬಹುದಾದ ಯಾವುದೇ ಪ್ರಶ್ನೆಗೂ ಸಮರ್ಥ ಸಮಜಾಯಿಷಿ ನೀಡಬಲ್ಲ ಅಂತಿಮ ಪುಸ್ತಕವಿದು. ವಿಜಕ್ಕೂ ನನ್ನ ತಿಳಿವನ್ನು ಹಿಗ್ಗಿಸಿದ ಕೃತಿಯಿದು.

– ಎನ್ ಎಸ್ ಶಂಕರಪ್ಪ

ಇಂಗ್ಲೀಷ್ ಆವೃತ್ತಿಯ ಮುನ್ನುಡಿ:

ಸ್ವಾತಂತ್ರ್ಯ ಒಂದು ಕಡೆ, ಸಾಮಾಜಿಕ ನ್ಯಾಯ ಇನ್ನೊಂದು ಕಡೆ–ಈ ಎರಡು ಗುರಿಗಳ ನಡುವಣ ಚಾರಿತ್ರಿಕ ಬಿಕ್ಕಟ್ಟನ್ನು ಮರುದರ್ಶಿಸಲು ಸಿಕ್ಕ ಈ ಅವಕಾಶಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಇಂದಿಗೂ ಪ್ರಸ್ತುತವಾದ ಹಾಗೂ ಸಮಕಾಲೀನ ಅನುರಣನಗಳುಳ್ಳ ಬಿಕ್ಕಟ್ಟಿದು.

೧೯೨೦, ೩೦ ಮತ್ತು ೪೦ರ ದಶಕಗಳಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ನಡುವಣ ತೋರಿಕೆಯ ಘರ್ಷಣೆ, ಈ ಬಿಕ್ಕಟ್ಟಿನ ಸಂಕೇತವಾಗಿತ್ತು. ಇದೀಗ,೨೦೧೫ರ ಆದಿಯಲ್ಲಿ ಪ್ರಕಟವಾದ ಅರುಂಧತಿ ರಾಯ್ ಅವರ 'ಡಾಕ್ಟರ್‌ಮತ್ತು ಸಂತ' ಕೃತಿ ಮತ್ತೆ ಇದೇ ಪ್ರಶ್ನೆಗೆ ಮರಳುವಂತೆ ಮಾಡಿದೆ. ಅವರ ಪಠ್ಯದಲ್ಲಿ ನನಗೆ ಕಂಡ ಗಂಭೀರ ಲೋಪ ದೋಷಗಳನ್ನು ಈ ನನ್ನ ಪುಟ್ಟ ಪುಸ್ತಕದಲ್ಲಿ ಎತ್ತಿ ತೋರಿಸಲು ಪ್ರಯತ್ನಿಸಿರುವೆಯಾದರೂ, ನನ್ನ ಈ ಹಿಂದಿನ ಎರಡು ಅಧ್ಯಯನಗಳಲ್ಲಿ ಚರ್ಚಿಸಿದ್ದ ಪ್ರಶ್ನೆಯನ್ನೇ ಮತ್ತೆ ಕೈಗೆತ್ತಿಕೊಳ್ಳುವಂತಾದುದಕ್ಕೆ ನಾನು ಅವರಿಗೆ ಧನ್ಯವಾದ ಹೇಳಬೇಕು.

ಅನೇಕ ವರ್ಷಗಳ ಹಿಂದೆ, ಕೆಲಕಾಲ ನಾನು ಅಂಬೇಡ್ಕರರ ಜೀವನಚರಿತ್ರೆ ಬರೆಯುವ ಆಲೋಚನೆ ಮಾಡಿದ್ದೆ. ನಾನು ಚೆನ್ನೈನಲ್ಲಿ ನೆಲೆಸಿದ್ದಾಗ, ಅಲ್ಲಿನ ದಲಿತ ಮುಖಂಡರೊಬ್ಬರು ಅಂಥ ಪ್ರಯತ್ನಕ್ಕೆ ಕೈ ಹಾಕುವಂತೆ ನನ್ನನ್ನು ಕೇಳಿದ್ದರು. ಆ ಕೋರಿಕೆ ನನ್ನ ಮನ ತಟ್ಟಿತು, ಜೊತೆಗೆ, ನಾನು ಇಲ್ಲವೆನ್ನಲಾಗದ ಪ್ರಸ್ತಾಪವೂ ಅದಾಗಿತ್ತು. ಆದರೆ ಸಂದರ್ಭಗಳ ಒತ್ತಡದಿಂದಾಗಿ ಮತ್ತು ಮರಾಠಿ ಭಾಷೆಯ ನನ್ನ ಅಲ್ಪಜ್ಞಾನದ ಕಾರಣದ ಅಧೈರ್ಯದಿಂದಾಗಿ, ನಾನು ಆ ಯೋಜನೆಯನ್ನು ಕೈಗೆತ್ತಿಕೊಳ್ಳಲು ಆಗಲಿಲ್ಲ. ಏನೇ ಆದರೂ, ಡಾ.ಅಂಬೇಡ್ಕರ್ ತಮ್ಮ ಬಹಳಷ್ಟು ಪತ್ರಗಳು, ಲೇಖನಗಳು ಹಾಗೂ ಭಾಷಣಗಳನ್ನು ಬರೆದದ್ದು ಮರಾಠಿಯಲ್ಲಿ.

ನಾನೀಗ ಗಾಂಧಿ–ಅಂಬೇಡ್ಕರ್ ವಾಗ್ವಾದ ಹಾಗೂ ಆ ಕುರಿತು ಅರುಂಧತಿ ರಾಯ್ ಅವರ ವ್ಯಾಖ್ಯಾನದ ಬಗ್ಗೆ ನನ್ನ ಟೀಕೆ ಟಿಪ್ಪಣಿಗಳನ್ನು ಮಂಡಿಸಲು ಮುಂದಾಗಿರುವುದಕ್ಕೆ ಈ ವಿಷಯ ಮಹತ್ವದ್ದು ಎಂಬುದೇ ಅದಕ್ಕೆ ಕಾರಣ. ಜೊತೆಗೆ ಗಾಂಧಿ, ಅಂಬೇಡ್ಕರ್ ಹಾಗೂ ಅವರ ಕಾಲದ ಬಗ್ಗೆ ನಾನು ನಡೆಸಿದ ಅಧ್ಯಯನಗಳ ಮೂಲಕ. ಈ ಚರ್ಚೆಗೆ ಪ್ರಸ್ತುತವಾದ ಮಾಹಿತಿ ನನಗೆ ಪ್ರಾಪ್ತಿಯಾಗಿರುವುದೂ ಇನ್ನೊಂದು ಕಾರಣ. ಇದು ರಹಸ್ಯ ಜ್ಞಾನವೇನೂ ಅಲ್ಲ, ಆದರೂ ಬಹಳ ಜನ ಗಮನಿಸಿದಂತೆ ತೋರುವುದಿಲ್ಲ. ಆದ್ದರಿಂದ ಇದನ್ನು ಹಂಚಿಕೊಳ್ಳುವ ಆಸೆಯಾಗಿದೆ.

– ರಾಜಮೋಹನ ಗಾಂಧೀ

ಮೋದಿ ಸರ್ಕಾರದ ಎರಡು ವರ್ಷ: ಒಂದು ಅಭಿಪ್ರಾಯ

– ಸುರೇಂದ್ರ ಕೌಲಗಿ

ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು ಎಂಬುದಕ್ಕಿಂತ ಎನ್‌ಡಿಎ ಪಕ್ಷ ಅಧಿಕಾರ ವಹಿಸಿಕೊಂಡಿತೆಂಬ ಕಾರಣಕ್ಕಾಗಿ ಹೆಚ್ಚು ಆತಂಕಗಳುಂಟಾದವು. ಏಕೆಂದರೆ ವ್ಯಕ್ತಿಗಿಂತ ಪಕ್ಷ ಬಲವತ್ತರವಾಗಿ ಇರುತ್ತದೆಂಬ ಕಾರಣಕ್ಕಾಗಿ. ಮೋದಿಯವರು ಆ ಪಕ್ಷದ ನಾಯಕರಾಗಿ ಆಯ್ಕೆಗೊಂಡು ಪ್ರಧಾನಿಯಾದರು. ಅವರು ನಾಯಕರಾಗಿ ಆಯ್ಕೆಗೊಳ್ಳುವುದಕ್ಕೆ ಅವರು ಪಕ್ಷದ ಸಿದ್ಧಾಂತಕ್ಕೆ ಹೆಚ್ಚು ಬದ್ಧರಾಗಿರುವ ವ್ಯಕ್ತಿಯೆಂಬ ಕಾರಣಕ್ಕೆ. ಆದರೆ ಯಾವುದೇ ಪಕ್ಷದ ಒಬ್ಬ ನಾಯಕ ಪ್ರಧಾನಮಂತ್ರಿತ್ವದ ಸ್ಥಾನವನ್ನು ಹೊಂದಿದ ಮೇಲೆ ತನ್ನಲ್ಲಿರುವ ವಿಚಾರಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ದೇಶದಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಪರಿಹಾರ ಮುಖ್ಯವಾದಾಗ ಅವನು ತನ್ನ ಮೂಲ ವಿಚಾರಗಳನ್ನು ಅವು ಎಷ್ಟೇ ಪ್ರತಿಗಾಮಿಯಾಗಿದ್ದರೂ ಪರಿಸ್ಥಿತಿಗೆ ತಕ್ಕಂತೆ ತನ್ನ ಆ ಹಳೆಯ ವಿಚಾರಗಳನ್ನು ತ್ಯಜಿಸಿ ಪುರೋಗಾಮಿ ವಿಚಾರಗಳಿಗೆ ಶರಣು ಹೋಗಬೇಕಾಗುತ್ತದೆ. ದೇಶದ ಪ್ರಧಾನಿ ತಾನೊಬ್ಬ ಖಾಸಗಿ ವ್ಯಕ್ತಿಯಾಗಿ ಉಳಿಯದೆ ಸಾರ್ವಜನಿಕ ವ್ಯಕ್ತಿಯಾಗಿ ರೂಪುಗೊಳ್ಳಬೇಕಾಗುತ್ತದೆ. ಪ್ರಧಾನಿಯಾದ ವ್ಯಕ್ತಿ ತನ್ನನ್ನು ಬದಲಾವಣೆಗೆ ತೆರೆದುಕೊಂಡಿರಬೇಕಾಗುತ್ತದೆ. ಇಲ್ಲವಾದರೆ ಅವನು ತನ್ನ ರಾಜಕೀಯ ಜನಪ್ರಿಯತೆ ಕಳೆದುಕೊಂಡು ಪ್ರಧಾನಿ ಸ್ಥಾನವನ್ನೇ ಕಳೆದುಕೊಳಬೇಕಾಗುತ್ತದೆ. ಆದರೆ ಅಧಿಕಾರದ ರುಚಿಕಂಡ ವ್ಯಕ್ತಿ ತನ್ನ ಅಧಿಕಾರ ಸ್ಥಾನವನ್ನು ಸುಲಭವಾಗಿ ಕಳೆದುಕೊಳ್ಳಲು ಇಷ್ಟ ಪಡುವುದಿಲ್ಲ. ಯಾವ ಜನಪ್ರಿಯ ಕಾರ್ಯಕ್ರಮ ಹಾಕಿಕೊಂಡರೆ ಅಧಿಕಾರ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆಂಬುದನ್ನು ಸದಾ ಆಲೋಚಿಸುತ್ತಿರುತ್ತಾನೆ. ಅದಕ್ಕೆ ಅನುಗುಣವಾಗಿ ತನ್ನ ಸರಕಾರದ ಕಾರ್ಯವೈಖರಿಯನ್ನು ರೂಪಿಸುತ್ತಾನೆ.

ಆದರೆ ಇದೇರೀತಿಯ ಅಭಿಪ್ರಾಯವನ್ನು ರಾಜಕೀಯ ಪಕ್ಷದ ಬಗ್ಗೆ ಹೇಳಲು ಸಾಧ್ಯವಿಲ್ಲ. ರಾಜಕೀಯ ಪಕ್ಷ ಹೆಚ್ಚಾಗಿ ತಾನು ಪ್ರತಿಪಾದಿಸುವ ಸಿದ್ಧಾಂತಗಳ ಜಾರಿಗೆ ಪ್ರಯತ್ನಿಸುತ್ತದೆಯೇ ಹೊರತು ಜನಸಾಮಾನ್ಯರ ಅನಿಸಿಕೆಗಳನ್ನು

ಅಷ್ಟೋಂದಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದಲೇ ಮೋದಿಯವರು ಪ್ರಧಾನಮಂತ್ರಿಯಾದುದಕ್ಕಿಂತ ಎನ್‌ಡಿಎ ಅಧಿಕಾರಕ್ಕೆ ಬಂದುದ್ದಕ್ಕೆ ಹೆಚ್ಚು ಆತಂಕ, ಅನಿಶ್ಚಿತತೆಗಳು ಕಾಡತೊಡಗಿದವು. ಪ್ರಧಾನಮಂತ್ರಿಯವರ ಮೇಲೆ ಪಕ್ಷ ತನ್ನ ಹಿಡಿತವನ್ನು ಇಟ್ಟುಕೊಂಡಿರುತ್ತದೆ. ಆ ಹಿಡಿತ ಬಿಗಿಯಾಗಿರಬಹುದು, ಅಥವಾ ಸಡಿಲವಾಗಿರಬಹುದು. ಅಂತೂ ಪ್ರಧಾನಿಯ ಮೇಲೆ ಪಕ್ಷದ ಹಿಡಿತ ಇದ್ದೇ ಇರುತ್ತದೆ. ಪ್ರಧಾನಿಯಾದ ವ್ಯಕ್ತಿ ಎಷ್ಟೇ ಪ್ರಬಲ ವ್ಯಕ್ತಿತ್ವವುಳ್ಳವನಾಗಿದ್ದರೂ ತನ್ನನ್ನು ಎತ್ತಿಕಟ್ಟಿದ ಪಕ್ಷವನ್ನು ಅಸಡ್ಡೆ ಮಾಡುವುದಕ್ಕಾಗುವುದಿಲ್ಲ.

ಎನ್‌ಡಿಎ ಹೆಚ್ಚಾಗಿ ಬಲಪಂಥೀಯ ವಿಚಾರಗಳನ್ನು ಪ್ರತಿಪಾದಿಸುವುದರಿಂದ ದೇಶದಲ್ಲಿ ಈಗಾಗಲೆ ಪ್ರಚಲಿತವಿರುವ ಸಂವಿಧಾನದತ್ತ ಪುರೋಗಾಮಿ ವಿಚಾರಗಳಿಗೆ ಎಲ್ಲಿ ಧಕ್ಕೆ ಬರುತ್ತದೋ ಎಂಬ ಭೀತಿ ಸಹಜವಾಗಿಯೇ ಉಂಟಾಗಿತ್ತು. ಆದರೆ ಕಳೆದ ಎರಡು ವರ್ಷಗಳ ಅವಧಿಯನ್ನು ಪೂರೈಸಿದ ನರೇಂದ್ರ ಮೋದಿಯವರು ತಮ್ಮ ಕೆಲ ನೀತಿಗಳ ವಿರುದ್ಧ ಉಂಟಾಗುತ್ತಿರುವ ಜನಾಭಿಪ್ರಾಯ ಮತ್ತು ಮುಖ್ಯವಾಗಿ ಇತ್ತೀಚೆಗೆ ಅದಕ್ಕೆ ಪ್ರತಿಸ್ಪರ್ಧಿಯಾಗಿ ಹುಟ್ಟಿಕೊಂಡಿರುವ ಆಮ್‌ಆದ್ಮಿ ಪಕ್ಷ ಇವುಗಳನ್ನು ಗಮನಿಸಿ ತಕ್ಕ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಆದರೆ ಅದು ಸತ್ಯವೇ, ಅಸತ್ಯವೇ ಎಂಬುದು ಗೊತ್ತಾಗುವುದಕ್ಕೆ ಇನ್ನು ಕೆಲವು ತಿಂಗಳು ಕಾದು ನೋಡಬೇಕಿದೆ.

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅದರ ಸಾಧನೆಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದಾಗಿದೆ. ೧) ಆಂತರಿಕ ಸಾಧನೆಗಳ ವಿಭಾಗ ೨) ವಿದೇಶ ನೀತಿ.

ಆಂತರಿಕ ಸಾಧನೆಗಳ ವಿಷಯದ ಬಗ್ಗೆ ಹೇಳುವುದಾದರೆ ಜನಧನ ಯೋಜನೆ, ರೈತರ ಬೆಳೆವಿಮೆ ಹಾಗೂ ಅಭಯಜೀವವಿಮೆಗಳ ಯೋಜನೆ, ಮಣ್ಣು ಪರೀಕ್ಷಾ ಯೋಜನೆ, ಸ್ವಚ್ಚ ಭಾರತ ಅಭೀಯಾನ, ಹೆಣ್ಣುಮಗು ಉಳಿಸಿ ಮತ್ತು ಓದಿಸಿ- ಇವು ಮುಖ್ಯವಾದ ಸಾಧನೆಗಳೆಂದು ಅನ್ನಿಸುತ್ತದೆ. ಸರ್ಕಾರದ ಇತ್ತೀಚಿಗಿನ ಘೋಷಣೆಗಳ ಪ್ರಕಾರ ಈ ಯೋಜನೆಗಳ ಲಾಭಗಳು ಜನರನ್ನು ತಲುಪುತ್ತಿವೆಯೆಂದು ಅನಿಸುತ್ತಿದೆ. ಈ ಬಗ್ಗೆ ಪ್ರತ್ಯೇಕವಾದ ಸರ್ವೇಕ್ಷಣ ಮಾಡಿದರೆ, ನಿಜಸಂಗತಿ ಗೊತ್ತಾಗುತ್ತದೆ. ಆದರೆ ಈ ಯೋಜನೆಗಳ ಪೂರ್ಣಲಾಭ ಜನತೆಗೆ ದೊರೆಯಬೇಕಾದರೆ ಇನ್ನೂ ಬಹು ದೂರದ ದಾರಿ ಕ್ರಮಿಸಬೇಕಿದೆ.

ಇನ್ನು ವಿದೇಶಾಂಗ ನೀತಿಯ ಬಗ್ಗೆ ಹೇಳುವುದಾದರೆ ಈ ಮೊದಲಿನ ಎಲ್ಲ ಪ್ರಧಾನಮಂತ್ರಿಗಳಿಗಿಂತ ಮೋದಿಯವರು ವಿದೇಶದ ರಾಷ್ಟ್ರಗಳೊಂದಿಗೆ ಸ್ನೇಹ ವರ್ಧಿಸಿಕೊಂಡಿದ್ದಾರೆ. ಆದರೆ ಚೀನಾ ಮತ್ತು ಪಾಕಿಸ್ತಾನದೊಂದಿಗೆ

ಮೈತ್ರಿ ಸಾಧಿಸಲು ವಿಫಲರಾಗಿದ್ದಾರೆ. ಅಮೇರಿಕಾದೊಂದಿಗಿನ ಅತೀ ಸ್ನೇಹ ದುಬಾರಿಯಾಗಬಹುದು.

ಮೋದಿ ಸರ್ಕಾರದ ಸಾಧನೆಗಳಲ್ಲಿ ದೇಶಕ್ಕೆ ಅಪಾಯವೊಡ್ಡುವ ಅನೇಕ ಸಾಧನೆಗಳಿವೆ ಎಂಬುದನ್ನು ಮರೆಯಲಿಕ್ಕಾಗುವುದಿಲ್ಲ. ಇಂಗ್ಲೀಷರು ಅನಾಧಿಕೃತವಾಗಿ ದೇಶದ ಸಂಪತ್ತನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ. ಇಂದು ನೂರಾರು ಬಹುರಾಷ್ಟ್ರೀಯ ಕಂಪನಿಗಳು ದೇಶದ ಪ್ರಾಕೃತಿಕ ಸಂಪತ್ತನ್ನು ಅಧಿಕೃತವಾಗಿ ಲೂಟಿ ಮಾಡುತ್ತಿವೆ. ಅಭಿವೃದ್ಧಿಯೆಂಬ ಚಿನ್ನದ ಪಾತ್ರೆಯಲ್ಲಿ ವಿನಾಶದ ಸತ್ಯಾಂಶಗಳು ಅಡಗಿವೆ ಎಂಬುದನ್ನು ಮೋದಿಯವರು ಎಷ್ಟು ಬೇಗನೆ ತಿಳಿಯುತ್ತಾರೋ ಅಷ್ಟು ಒಳ್ಳೆಯದು.

'ಕಾಂಗ್ರೆಸ್ ಮುಕ್ತ ಭಾರತ' ಎಂಬ ರಾಜಕೀಯ ಘೋಷಣೆಯನ್ನು ಸರ್ವಥಾ ಒಪ್ಪಲು ಸಾಧ್ಯವಿಲ್ಲ. ವಿರೋಧಪಕ್ಷಮುಕ್ತ ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವವೆಂದೆನಿಸಿಕೊಳ್ಳುವುದಿಲ್ಲ. ಬಲಿಷ್ಠ ಆಡಳಿತ ಪಕ್ಷವು ಬಲಿಷ್ಠ ವಿರೋಧ ಪಕ್ಷವನ್ನು ರೂಪಿಸಲು ಪ್ರಯತ್ನ ಮಾಡುವುದರಲ್ಲಿಯೇ ಪ್ರಜಾಪ್ರಭುತ್ವದ ಹಿರುಮೆ ಮತ್ತು ಆಡಳಿತ ಪಕ್ಷದ ಗರಿಮೆ ಇವೆ. ಸರ್ಕಾರದ ಅಸೀಮಿತ ಅಡ್ಡಪರಿಣಾಮಗಳನ್ನು ಸೀಮಿತ ಶಬ್ಧಗಳಲ್ಲಿ ಹೇಳುವುದು ಅಸಾಧ್ಯ.

– ಹೊಸ ಮನುಷ್ಯ ಸಾಭಾರ

ವಾಚಕರಲ್ಲಿ ಬಿನ್ನಹ

ಕಳೆದ 16 ವರ್ಷಗಳಿಂದ "ಜನಪದ ವಿಚಾರ"ದ ಚಂದ ಕೇವಲ ಒಂದು ನೂರು ರೂಪಾಯಿ ಮಾತ್ರ ಇದೆ. ಈಗಿನ ದುಬಾರಿ ಕಾಲದಲ್ಲಿ ಪತ್ರಿಕೆಯ ಚಂದ ಹೆಚ್ಚಿಸುವುದು ಅನಿವಾರ್ಯವಾಗಿದೆ. ಇನ್ನು ಮುಂದೆ ವಾರ್ಷಿಕ ಚಂದ ಇನ್ನೂರು ನೂರು. ಸನ್ಮಾನ್ಯ ವಾಚಕರು ಸಹಕರಿಸಬೇಕಾಗಿ ವಿನಂತಿ.

ಪ್ರಕಾಶಕರು

ಕೋಮು ಸಾಮರಸ್ಯಕ್ಕಾಗಿ ಕೆಲವೊಂದು ಸಲಹೆಗಳು

– ಯತಿರಾಜ್ ಬ್ಯಾಲಹಳ್ಳಿ

ಭಾರತದ ಬಹುದೊಡ್ಡ ಸಮಸ್ಯೆಯಾಗಿ ಅಸಹಿಷ್ಣುತೆ ಬೆಳೆಯುತ್ತಿದೆ. ಹಿಂದೂ, ಮುಸ್ಲಿಮರ ನಡುವೆ ಅಂತರ ಸೃಷ್ಟಿಯಾಗುತ್ತಿದೆ. ಭಾರತದ ಈ ನಡೆಯ ಹಿಂದೆ ರಾಜಕೀಯ ಹಿತಾಶಕ್ತಿ ಕೆಲಸ ಮಾಡುತ್ತಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಕೋಮು ಸಾಮರಸ್ಯದ ಕುರಿತು ಇಂದು ಹೆಚ್ಚು ಹೆಚ್ಚು ಚಿಂತಿಸಬೇಕಾಗಿದೆ. ಹೀಗೆ ಚಿಂತಿಸುತ್ತಾ, ಕೋಮು ಸಾಮರಸ್ಯಕ್ಕೆ ಏನು ಮಾಡಬಹುದು ಎಂದುಕೊಂಡಾಗ ಮೂಡಿದ ಕೆಲವು ಅನಿಸಿಕೆಗಳನ್ನೇ ಇಲ್ಲಿ ಹೇಳುತ್ತಿರುವುದು. ಸಹಿಷ್ಣುತೆ ಮತ್ತು ಕೋಮು ಸಾಮರಸ್ಯದ ಬಗ್ಗೆ ಇಂದು ಹೆಚ್ಚು ಬರಹಗಳು ಮೂಡಿಬರುತ್ತಿವೆ. ಇದು ಅನಿವಾರ್ಯವೂ ಆಗಿದೆ. ನಮ್ಮ ಸಂವಾದ ಸಂಸ್ಕೃತಿಯು ಸಂಘರ್ಷದತ್ತ ನಡೆಯುತ್ತಿರುವ ಈ ಹೊತ್ತಿನಲ್ಲಿ ಇಂಥ ಬೆಳವಣಿಗೆಯು ಒಂದೊಂದೆ ದಾರಿದೀಪಗಳನ್ನು ಬೆಳಗಿಸುತ್ತಿದೆ. ಹಲವಾರು ಹಿರಿಯರು ಆಡುತ್ತಿರುವ ಮಾತುಗಳ ಪರಿಣಾಮದಿಂದ ಮೂಡಿದ ಕೆಲವು ಅಭಿಪ್ರಾಯಗಳು ಇಲ್ಲಿವೆ. ಇಲ್ಲಿ ಹೇಳುವ ವಿಚಾರಗಳು ನನ್ನ ಅಭಿಪ್ರಾಯದ ಜತೆಗೆ ಹಲವರ ಅಭಿಪ್ರಾಯವೂ ಆಗಿರಬಹುದು.

ಒಂದು: ಮುಸ್ಲಿಮರಲ್ಲಿನ ದೋಷಗಳನ್ನು ಹಿಂದೂಗಳು ಬೆಟ್ಟು ಮಾಡಿ ತೋರಿಸುವುದು; ಹಿಂದೂಗಳಲ್ಲಿನ ದೋಷಗಳನ್ನು ಮುಸ್ಲಿಮರು ಬೆಟ್ಟು ಮಾಡಿ ತೋರಿಸುವುದು ಮತೀಯ ಅಂಧಶ್ರದ್ಧೆಗೆ ಕಾರಣವಾಗುತ್ತಿದೆ. ಇಸ್ಲಾಂ ಧರ್ಮಾನುಯಾಯಿಗಳ ತಪ್ಪುಗಳನ್ನು ಇಸ್ಲಾಂ ಧಾರ್ಮಿಕ ಮುಖಂಡರೇ ಸರಿಪಡಿಸಬೇಕು. ಹಿಂದೂ ಧಾರ್ಮಿಕ ಮುಖಂಡರು ತಮ್ಮ ಧರ್ಮದೊಳಗಿನ ಅಂಧಶ್ರದ್ಧೆಯ ಬಗ್ಗೆ ಮಾತನಾಡಬೇಕು. ಪರಸ್ಪರನ್ನು ಬೆಟ್ಟುಮಾಡಿ ತೋರಿಸುತ್ತಾ ಇದ್ದರೆ ಸಮಸ್ಯೆ ಪರಿಹಾರವಾಗದು. ಧರ್ಮವನ್ನು ಗುತ್ತಿಗೆ ಪಡೆದವರಂತೆ ವರ್ತಿಸುತ್ತಿರುವ ಧಾರ್ಮಿಕ ಮುಖಂಡರು ಸಮಾಜಘಾತುಕರಾಗಿ ಶ್ರೀಸಾಮಾನ್ಯರನ್ನು ದಾರಿ ತಪ್ಪಿಸುತ್ತಿರುವರು.

ಹೀಗೆ ಯೋಚಿಸುತ್ತಾ ಇರುವಾಗ, ಪಿ.ಲಂಕೇಶರ 'ಗುಣಮುಖ' ನಾಟಕ ನೆನಪಾಗುತ್ತದೆ. ಆ ನಾಟಕದಲ್ಲಿ ನಾಧೀರ್‌ಶಾ ಅಧಿಕಾರ ಮತ್ತು ಧರ್ಮಾಂಧತೆಯಿಂದ ನರಳುತ್ತಿರುತ್ತಾನೆ. ಅವನಿಗೆ ತನ್ನ ರೋಗದ ಮೂಲ ಯಾವುದೆಂದು ತಿಳಿಯುವುದಿಲ್ಲ. ಆತನ ರೋಗವನ್ನು ಗುಣಪಡಿಸಲು

ಬಂದವರೆಲ್ಲ ಆತನನ್ನು ಹೊಗಳುತ್ತಿದ್ದದ್ದು ನಾದೀರ್ಗೆ ಹಿಡಿಸುತ್ತಿರಲಿಲ್ಲ. ಆದರೆ ಆತನನ್ನು ಮೊದಲ ಬಾರಿಗೆ ಉಢಾಪೆಯಿಂದ ವೃದ್ಧ ಹಕೀಮ ಅಲಾಯಿಖಾನ್ ಮಾತನಾಡಿಸುತ್ತಾನೆ. ಇಂಚಿಂಚು ನಾದೀರ್‌ನನ್ನು ಕೊಂಕು ನುಡಿಗಳಿಂದ ಕುಕ್ಕುತ್ತಾ ಅಧಿಕಾರ ಮತ್ತು ಧರ್ಮಾಂಧತೆಯಿಂದ ಹೊರತಂದು ತಕ್ಕ ಮಟ್ಟಿಗೆ ಗುಣಮುಖನನ್ನಾಗಿ ಮಾಡುತ್ತಾನೆ, ಅಲಾಯಿಖಾನ್.

ಇಲ್ಲಿಯವರೆಗೆ ಈ ಎರಡು ಪಾತ್ರಗಳು ಗ್ರಹಿಕೆಗೆ ಹೋಳಗಾಗಿರುವದು ಮುಖ್ಯವಲ್ಲ. ಇಂದಿನ ಸನ್ನಿವೇಶದಲ್ಲಿ ಇವರಿಬ್ಬರು ಬೇರೆ ರೀತಿಯಲ್ಲಿ ಕಾಣುತ್ತಿದ್ದಾರೆ. ಒಂದು ವೇಳೆ ವಿಶ್ವಮಾನವತೆಯು ಪ್ರತಿರೂಪವಾದ ಅಲಾಯಿಖಾನ್‌ನು ನಾದೀರ್‌ಶಾನ ಕಣ್ಣಿಗೆ ಬೇರೆ ಧರ್ಮದವನಾಗಿ ಕಂಡಿದ್ದರೆ ಖಂಡಿತ ನಾದೀರ್ ಈ ಹಕೀಮನನ್ನು ಕೊಲ್ಲುತ್ತಿದ್ದ. ನಾದೀರ್‌ಗೆ ಅಲ್ಲಾ ಕನಸಿನಲ್ಲಿ ಬಂದು, ಅಧಿಕಾರದಾಸೆಯನ್ನು ತುಂಬಿದ್ದಾನೆ. ಆದರೆ ಅಲ್ಲಾಯಿಖಾನನಿಗೆ ಅಧಿಕಾರ, ಅಹಂಕಾರದಿಂದಾಗುವ ಮನುಷ್ಯತ್ವದ ನಾಶವನ್ನು ಅದೇ ಅಲ್ಲಾಹು ಕನಸಿನಲ್ಲಿ ಬಂದು ಹೇಳಿದ್ದಾನೆ. ಕೊನೆಗೆ ಗೆಲ್ಲುವದು ಹಕೀಮನ ಅಲ್ಲಾಹುವೇ ಹೊರತು, ನಾದೀರ್‌ನ ಕನಸಿನ ಅಲ್ಲಾ ಅಲ್ಲ. ಹಕೀಮ ಮನಸ್ಸಿನ ಖಾಯಿಲೆಯನ್ನು ವಾಸಿ ಮಾಡುವ ಧಾರ್ಮಿಕ ಸಂತನಂತೆ ಕಾಣುತ್ತಿದ್ದಾನೆ.

ಹೀಗೆ ಎಲ್ಲ ಧರ್ಮಗಳಲ್ಲೂ ಹಕೀಮ ಮತ್ತು ನಾಸೀರ್‌ಶಾಗಳು ಇದ್ದಾರೆ. ಆಯಾ ಧರ್ಮದಲ್ಲಿನ ತಪ್ಪುಗಳನ್ನು ಆಯಾ ಧರ್ಮದವರೇ ತಿದ್ದುವ ಧಾರ್ಮಿಕ ವ್ಯಕ್ತಿಗಳು ಹೆಚ್ಚಾದರೆ ಖಂಡಿತ ಕೋಮು ಸಾಮರಸ್ಯ ಸಾಧಿಸಬಹುದು. ಒಂದು ಧರ್ಮದವರ ತಪ್ಪುಗಳನ್ನು ಇನ್ನೊಂದು ಧರ್ಮದವರು ಸರಿಪಡಿಸಲು ಹೋಗಬಾರದು ಎಂಬ ಮಾತುಗಳನ್ನು ಮಹಾತ್ಮ ಗಾಂಧೀಜಿಯವರು ೧೯೩೭ರಲ್ಲಿಯೇ ಹೇಳಿರುವುದನ್ನು ರಾಮಚಂದ್ರಗುಹಾ ಅವರು, 'ಧರ್ಮಾಂಧತೆಯ ವಿರುದ್ಧ ಧ್ವನಿ ಎತ್ತುವುದು ಅಗತ್ಯ' ಎಂಬ ಲೇಖನವನ್ನು ತಮ್ಮಗಳ ಅಂಕಣದಲ್ಲಿ (ಪ್ರಜಾವಾಣಿ,೨೨ ಜನವರಿ, ೨೦೧೬) ಬರೆದಿರುವುದು ಮೌಲ್ವಿಕವಾಗಿದೆ.

ಎರಡು: ಶಾಲಾ–ಕಾಲೇಜು ಮಟ್ಟದಲ್ಲಿಯೇ ಹಿಂದೂ, ಮುಸ್ಲಿಂ ಸಹೋದರತೆಯನ್ನು ಮಕ್ಕಳಲ್ಲಿ ಶಿಕ್ಷಕರು ಬೆಳೆಸಬೇಕಾಗಿದೆ. ಪಠ್ಯ ಪುಸ್ತಕಗಳಲ್ಲಿ ವೈಚಾರಿಕ ಅಂಶಗಳನ್ನು ಅಳವಡಿಸುವ ವಿಚಾರ ಬದಿಗಿರಲಿ. ಅದಕ್ಕಿಂತ ಭಿನ್ನವಾದ ಹಾಗು ಮುಖ್ಯವಾದ ವಿಚಾರ ಮತ್ತೊಂದಿದೆ. ಅದೇನಂದರೆ ಶಾಲಾ–ಕಾಲೇಜಿನಲ್ಲಿ ಮಕ್ಕಳು ಮಾಡುವ ದೇವರ ಪ್ರಾರ್ಥನೆಯ ವಿಚಾರ. ಪ್ರಾಥಮಿಕ ಹಾಗು ಪ್ರೌಢಶಾಲೆಗಳಲ್ಲಿ (ಕೆಲವೊಂದು ಕಡೆ ಪಿ.ಯು ಹಾಗೂ ಡಿಗ್ರಿ ಕಾಲೇಜುಗಳನ್ನು ಸೇರಿಕೊಳ್ಳಬಹುದು) ತರಗತಿಗಳು ಪ್ರಾರಂಭವಾಗುವ ಮುನ್ನ ಸಾಮೂಹಿಕ

ಪ್ರಾರ್ಥನೆ ಮಾಡಿಸುತ್ತಾರೆ. ನಾಡಗೀತೆ, ರಾಷ್ಟ್ರಗೀತೆಯ ಜತೆಗೆ ಹಲವಾರು ಸಂಸ್ಕೃತ ಶ್ಲೋಕಗಳನ್ನು ಮಕ್ಕಳಿಗೆ ಕಂಠಪಾಠ ಮಾಡಿಸಿ ಪ್ರಾರ್ಥನೆಯ ವೇಳೆ ಪ್ರತಿದಿನ ಹೇಳಿಸುತ್ತಾರೆ. ಇದು ಹಿಂದೂ ಶಿಕ್ಷಕರು, ಹಿಂದೂ ಮಕ್ಕಳು ಹೆಚ್ಚು ಇರುವ ಶಾಲೆಗಳಲ್ಲಿ ನಡಯುತ್ತದೆ.

ಆದರೇ, ಆಕ್ಷೇಪವಿರುವುದು ಶಾಲೆಗಳಲ್ಲಿ ಹಿಂದೂ ದೇವರುಗಳನ್ನಾಧಾರಿದ ಪ್ರಾರ್ಥನೆಯನ್ನು ಮಕ್ಕಳಲ್ಲಿ ರೂಢಿಸುವಲ್ಲಿ. ಹಾಗೆಂದು ಮಕ್ಕಳು ಮಾಡುತ್ತಿರುವ ಪ್ರಾರ್ಥನೆಯಲ್ಲಿ ಸಮಾಜ ವಿರೋಧಿ ಧಾರ್ಮಿಕ ಅಂಶಗಳಿವೆ ಎಂದಲ್ಲ. ದೇವರು ಮತ್ತು ಧರ್ಮವನ್ನು ನಂಬಿ ಹಾಳಾದೆ ಎನ್ನುವವರು ಬೆರಳೆಣಿಕೆಯ ಮಂದಿಯಷ್ಟೇ. ಮನೆಯಲ್ಲಿ ಪೋಷಕರು ಮಕ್ಕಳಿಗೆ ತಮ್ಮ ದೇವರು, ಧರ್ಮದ ಕುರಿತು ಹೇಳಿಕೊಡುತ್ತಾರೆ. ಶಾಲಾ-ಕಾಲೇಜುಗಳಲ್ಲಿ ಒಂದೇ ಧರ್ಮದ ಮಕ್ಕಳಿರುವುದಿಲ್ಲ. ಪೋಷಕರು ಹೇಳಿದ್ದಕ್ಕಿಂತ ಶಿಕ್ಷಕರು ಕಲಿಸಿದ್ದನ್ನು ಮಕ್ಕಳು ನಂಬುತ್ತಾರೆ. ಇದರಿಂದಾಗಿ ಮಕ್ಕಳನ್ನು ಕೋಮು ಶಕ್ತಿಗಳ ಮುಂದೆ ಧಾರ್ಮಿಕ ಅಂಧಶ್ರದ್ಧೆಗೆ ಬಳಸಿಕೊಳ್ಳಬಹುದು.

ಜತೆಗೆ ಒಂದು ಶಾಲೆಯಲ್ಲಿ ಹಿಂದೂ ಮಕ್ಕಳಷ್ಟೇ ಇರುದಿಲ್ಲ. ಅಲ್ಲಿ ಬೇರೆ ಕೋಮಿನ ಮಕ್ಕಳೂ ಇರುತ್ತಾರೆ. ಸಂಸ್ಕೃತ ಶ್ಲೋಕಗಳು ಮುಸ್ಲಿಂ ಮಕ್ಕಳಲ್ಲಿ ತಾವು ಹೊರಗಿನವರು ಎಂಬ ಭಾವನೆಯನ್ನು ತರಬಹುದು. ಹಾಗೆಯೇ ಕ್ರಿಶ್ಚಿಯನ್ ಶಾಲೆಗಳಲ್ಲಿ, ಮುಸ್ಲಿಂ ಶಾಲೆಗಳಲ್ಲಿ ಆಯಾ ಧರ್ಮಕ್ಕೆ ಸಂಭಂಧಿಸಿದ ಧರ್ಮಗ್ರಂಥಗಳಲ್ಲಿನ ಅಂಶಗಳನ್ನಷ್ಟೆ ಕಲಿಸಿ ಮಕ್ಕಳಿಗೆ ಪ್ರಾರ್ಥನೆ ಮಾಡುವುದನ್ನು ಹೇಳಿಕೊಡುತ್ತಾರೆ. ಅಲ್ಲಿ ಹಿಂದೂ ಮಕ್ಕಳಿದ್ದರೆ ತಾವು ಅನ್ಯರು ಎಂಬ ಭಾವನೆ ಬರಬಹುದು. ಅಥವಾ ತಮ್ಮ ಧರ್ಮ ಕೀಳು ಎಂಬ ಭಾವನೆ ನೆಲೆಸಬಹುದು. ಮನೆಯ ಆಚರಣೆಯೆ ಒಂದು; ಶಾಲೆಯಲ್ಲಿ ಆಚರಣೆಯೇ ಮತ್ತೊಂದಾದಾಗ ಮಕ್ಕಳಿಗೆ ದ್ವಂದ್ವವೆದ್ದು ಧಾರ್ಮಿಕ ಅಂಧಶ್ರದ್ಧೆಗೆ ಬಲಿಯಾಗಬಹುದು. ಹಾಗೆಂದು ಶಾಲಾ-ಕಾಲೇಜುಗಳಲ್ಲಿ ದೇವರ ಪ್ರಾರ್ಥನೆಯನ್ನು ಮಾಡದಂತೆ ತಡೆಯಬೇಕು ಎಂದು ಹೇಳಿದರೆ ಮೂರ್ಖತನವಾಗುತ್ತದೆ. ಇಂಥ ರೂಢಿಯೊಳಗೆಯೇ ಯಾವ ಸುಧಾರಣೆ ಮಾಡಬಹುದು?

ಹಿಂದೂ, ಇಸ್ಲಾಂ, ಕ್ರೈಸ್ತ ಧರ್ಮದಲ್ಲಿನ ಕೆಲವು ಉನ್ನತವಾದ ಸಾಲುಗಳನ್ನು ಮಕ್ಕಳಿಗೆ ಆಲಿಸಿ ಪ್ರಾರ್ಥನೆಯನ್ನು ಮಾಡಿಸಿದರೆ ಸಹಿಷ್ಣತೆಗೆ ಒಂದು ಹೆಜ್ಜೆಯನ್ನು ಮುಂದೆ ಇಡಬಹುದೆ? ಅಥವಾ ರಾಮಕೃಷ್ಣ ಪರಮಹಂಸ , ಸ್ವಾಮಿ ವಿವೇಕಾನಂದ, ಮಹಾತ್ಮ ಕಬೀರ್... ಮೊದಲಾದ ಆದ್ಯಾತ್ಮಿಕ ವ್ಯಕ್ತಿಗಳು ಸಾರಿರುವ ವಿವಿಧತೆಯಲ್ಲಿನ ಏಕತೆಯ ಸಾಲುಗಳನ್ನು ಮಕ್ಕಳಿಗೆ ಹುರುವಡಿಸಿ ಪ್ರಾರ್ಥನೆಯಾಗಿ ಕಲಿಸಬಹುದಲ್ಲವೇ? ಸರ್ಕಾರವೇ ಇಂಥದೊಂದು

ಪ್ರಾರ್ಥನೆಗೀತೆಯನ್ನು ಸಮಾಜದ ಸ್ವಾಸ್ಥ್ಯವನ್ನು ಬಯಸುತ್ತಿರುವ ಹಲವು ಧಾರ್ಮಿಕ ಮುಖಂಡರಿಂದ ಸಿದ್ಧಪಡಿಸಿದ ಕಡ್ಡಾಯ ಪ್ರಾರ್ಥನೆಯಾಗಿ ಮಾಡಿದರೆ ಹೇಗಿರುತ್ತದೆ ಎಂದುಕೊಂಡರೆ ರೋಮಾಂಚನವಾಗುತ್ತದೆ. ಜತೆಗೆ ಸ್ವಾಮಿ ಅಗ್ನಿವೇಶ್ ಅವರು ಹೇಳುವಂತೆ, ನಮ್ಮ ಸಂವಿಧಾನದಲ್ಲಿನ ಪ್ರಸ್ತಾವನೆಯನ್ನು ಪ್ರಾರ್ಥನೆಯಂತೆ ದಿನನಿತ್ಯ ಮಕ್ಕಳಿಂದ ಹೇಳಿಸಿದರೆ ಸಂವಿಧಾನದ ಆಶಯವನ್ನೂ ಮಕ್ಕಳಲ್ಲಿ ನಾವೆಲ್ಲ ಒಂದೇ ಎಂಬ ಭಾವನೆಯನ್ನು ಬೆಳೆಸಬಹುದೇನೊ?

ಮೂರು: ನಾನು ಓದುತ್ತಿರುವ ಕಾಲೇಜಿನಲ್ಲಿ ಹಿಂದೂಗಳು ಬಹುಸಂಖ್ಯಾತರು. ಬೆರಳೆಣಿಕೆಯಷ್ಟು ಮುಸ್ಲಿಂ ಇರಬಹುದು. ನಾನು ಇರುವ ಹಾಸ್ಟಲ್‌ನಲ್ಲಿ ಹಿಂದೂಗಳೆ ತುಂಬಿದ್ದಾರೆ. ನಮ್ಮ ನಡುವಿನಲ್ಲಿ 'ಮುಬಾರಕ್' ಎಂದು ಮುಸ್ಲಿಂ ಗೆಳೆಯ ಇದ್ದಾನೆ. ಟಿಪ್ಪು ವಿಷಯದಲ್ಲಿ ಮಡಿಕೇರಿಯಲ್ಲಿ ಗಲಭೆಯಾಗಿ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿತ್ತು. ಇದನ್ನು ಅನಿರೀಕ್ಷಿತವಾಗಿ ಗೆಳೆಯರೆಲ್ಲ ಮುಬಾರಕ್‌ನೊಂದಿಗೆ ನೋಡಬೇಕಾಯ್ತು. ಮುಬಾರಕ್ ಮೊಗ ಒಂದು ರೀತಿಯಲ್ಲಿ ಕಸಿವಿಸಿಯಾಯ್ತು. ಆತ ನಮಗೆಲ್ಲ ಆತ್ಮೀಯ ಗೆಳೆಯ. ಅದರಲ್ಲೂ ಆರ್.ಎಸ್.ಎಸ್ ಹಿನ್ನೆಲೆಯಿಂದ ಬಂದಿರುವ ನನ್ನ ಗೆಳೆಯ ರಂಜನ್‌ಗೆ ಅತ್ಯಂತ ಆತ್ಮೀಯ. ನಮ್ಮೆಲ್ಲರಿಗಿಂತಲೂ ಮುಬಾರಕ್‌ನ ಕಸಿವಿಸಿ ಹೆಚ್ಚು ಅರ್ಥವಾದದ್ದು ರಂಜನ್‌ಗೆ. ಆತ ನನಗೆ ಹೇಳಿದ : 'ನೋಡು ನಾವಿಬ್ಬರು ಆತ್ಮೀಯರು. ಅಲ್ಲಿ ಹಿಂದೂ ಮುಸ್ಲಿಂ ಕಿತ್ತಾಡುತ್ತಿದ್ದಾರೆ. ಗೂಂಡಗಳ ರೀತಿ ವರ್ತಿಸುತ್ತಾ ಇದ್ದಾರೆ. ನನ್ನ ಮತ್ತು ಅವನ ಸ್ನೇಹಿತನವನ್ನು ಇವರು ಒಡೆಯಲು ಸಾಧ್ಯನಾ?' ಎಂದು ಕೇಳಿದ. ಆಗ ನನಗನಿಸಿದ್ದು: ಕನಿಷ್ಠ ಹತ್ತು ಮಂದಿ ಹಿಂದೂ ಯುವಕರಿಗೆ ಒಬ್ಬ ಮುಸ್ಲಿಂಯುವಕ , ಹಾಗೆಯೇ ಕನಿಷ್ಠ ಹತ್ತು ಮಂದಿ ಮುಸ್ಲಿಂ ಯುವಕರಿಗೆ ಒಬ್ಬ ಹಿಂದೂ ಯುವಕ ಜೀವದ ಗೆಳೆಯನಾದರೆ ಭಾರತ ಪ್ರಜ್ವಲಿಸುತ್ತಲ್ಲವೆ? ಭಿನ್ನರೆನಿಸಿದವರು ಒಂದೆಡೆ ಸೇರದಿದ್ದರೆ ಮನುಷ್ಯತ್ವ ಹೇಗೆ ಅರ್ಥ ಆಗುತ್ತದೆ?

ನಾಲ್ಕು: ಇಡೀ ಪ್ರಪಂಚವೆ ಭಾರತಕ್ಕೆ ಗೌರವ ಕೊಡುವುದು ಇಲ್ಲಿನ ವಿವಿಧತೆಯಲ್ಲಿನ ಏಕತೆಯ ವೈಶಿಷ್ಟ್ಯದಿಂದ ಮಾತ್ರ. ಪ್ರಪಂಚದ ಮೂಲೆಮೂಲೆಗೂ ನಮ್ಮ ಆಧ್ಯಾತ್ಮಿಕ ಜೀವಿಗಳೆಲ್ಲಾ ಇಲ್ಲಿ ಸಹಿಷ್ಣುತೆಯ ಶ್ರೇಷ್ಠತೆಯನ್ನು ಜಗತ್ತಿಗೆ ಸಾರಿ ಹೇಳಿದ್ದಾರೆ. ಇಂದು ನಮಗೆ ಇದರ ಅರಿವಿರಬೇಕು. ನಮ್ಮ ಯುವ ಜನತೆಯಲ್ಲಿ ಸಹಿಷ್ಣುತೆಯ ಮನೋಭಾವವನ್ನು ಬೆಳೆಸಲು ನಾವು ಹೆಚ್ಚು ಹೆಚ್ಚು ಚಿಂತಿಸಬೇಕಾಗಿದೆ.

ಐದು: ಕೋಮು ಸಾಮರಸ್ಯ ಕದಡುವಲ್ಲಿ ನಮ್ಮ ಮಾಧ್ಯಮಗಳ ಪಾತ್ರ ಬಹು ದೊಡ್ಡದಾಗಿದೆ. ನಮ್ಮ ಮಾಧ್ಯಮಗಳು ಎಲ್ಲಿಯಾದರೂ ಹಿಂದೂ ಮುಸ್ಲಿಂ

ಗಲಭೆಯಾದರೆ, ಅಥವಾ ಗೋಮಾಂಸದ ವಿಚಾರವಾಗಿ ಚರ್ಚೆಯೆದ್ದರೆ ತಿಂಗಳುಗಟ್ಟಲೆ ಒಂದೇ ವಿಚಾರವನ್ನು ಕುರಿತು ಚರ್ಚೆ ಮಾಡುತ್ತಲೆ ಇರುತ್ತವೆ. ದಿನನಿತ್ಯ ಸಾಮರಸ್ಯ ಸಾರುವ ಹಲವು ಘಟನೆಗಳು ಸುತ್ತ ಘಟಿಸುತ್ತಿದ್ದರೂ ನಮ್ಮ ಮಾಧ್ಯಮಗಳಿಗೆ ಕಾಣುವುದು ಅಪರೂಪ. ನೆಗೆಟೀವ್ ಅಂಶಗಳಷ್ಟೆ ಸುದ್ದಿ ಎಂಬ ಕಾಲ ಹಿಂದೆ ಸರಿಯುತ್ತಿದೆ. ಕೋಮು ಸಾಮರಸ್ಯ ಸಾರುವ ಘಟನೆಗಳು ನಿಜವಾಗಿಯೂ ಸುದ್ದಿಯಾಗುತ್ತವೆ.

ನಮ್ಮ ಭಾರತೀಯ ಮಾಧ್ಯಮಗಳಿಗೆ ಪ್ಯಾರೀಸ್ ಮಾಧ್ಯಮಗಳು ಮಾದರಿಯಾಗಬೇಕಿದೆ. ಐ.ಎಸ್.ಐ.ಎಸ್. ಉಗ್ರರು ಪ್ಯಾರೀಸ್ ಮೇಲೆ ದಾಳಿ ಮಾಡಿದಾಗ ನೂರಾರು ಮಂದಿ ಸತ್ತರು. ಆಗ ಅಲ್ಲಿನ ಮಾಧ್ಯಮಗಳು ತೋರಿದ ಪ್ರಜ್ಞೆ ಯಾರೂ ಮರೆಯಲಾಗದ್ದು. ಯಾವ ಮಾಧ್ಯವೂ ಸತ್ತವರ ಹೆಣಗಳನ್ನು ತೋರಿಸಿ, ಜನರಿಗೆ ಮತ್ತಷ್ಟು ಭಯಹುಟ್ಟಿಸಲು ಹೋಗಲಿಲ್ಲ. ಸತ್ತ ವ್ಯಕ್ತಿಯ ಗುರುತು ಸಿಕ್ಕ ತಕ್ಷಣ ಅವರ ನಗು ಮೊಗದ ಭಾವಚಿತ್ರವನ್ನು ತೋರಿಸಿ, ಅವರು ಯಾವ ಕೆಲಸ ಮಾಡುತ್ತಿದ್ದರು ಅವರ ವಿಳಾಸವೇನು ಇತ್ಯಾದಿ ಮಾಹಿತಿಯನ್ನು ನೀಡುತ್ತಿದ್ದರು. ಪ್ಯಾನಲ್ ಡಿಸ್ಕಶನ್ ಏರ್ಪಡಿಸಿ, ರಾಜಕಾರಣಿಗಳನ್ನು ಕೂರಿಸಿ ಮಾತನಾಡಿಸಲಿಲ್ಲ. ಭಾಯೋತ್ಪಾಧನೆಯ ಬಗ್ಗೆ ಅಧ್ಯಯನ ಮಾಡಿರುವ ವಿಷಯತಜ್ಞರನ್ನು ಕೂರಿಸಿ ಚರ್ಚೆ ಮಾಡಿದರು.

ಈ ರೀತಿ ನಮ್ಮ ಮಾಧ್ಯಮಗಳು ನಡೆದುಕೊಳ್ಳುತ್ತಿವೆಯೇ? ಹಿಂದೂ-ಮುಸ್ಲಿಂ ಗಲಭೆಗಳಾದಾಗ ದಿನವಿಡೀ ನೇರ ಪ್ರಸಾರ ಮಾಡಿ, ಜನರಲ್ಲಿ ಆತಂಕ ಹುಟ್ಟಿಸುವ ಕೆಲಸ ಮಾಡುತ್ತಿವೆ. ಹಿಂದೂ ಮುಸ್ಲಿಂ ಸಾಮರಸ್ಯವನ್ನು ಸಾರುವ ಘಟನೆಗಳು ತಮ್ಮ ಸುತ್ತಮುತ್ತಲೂ ಘಟಿಸುತ್ತದ್ದರೂ ಅವುಗಳಿಗೆ ಕಾಣುವುದಿಲ್ಲ. ಶ್ರೀಸಾಮಾನ್ಯರಿಗೆ ಈ ಯಾವ ಗಲಭೆಗಳು ಬೇಕಾಗಿಲ್ಲ. ಗಲಭೆಗಳು ಬೇಕಾಗಿರುವುದು ರಾಜಕೀಯ ಪಕ್ಷಗಳಿಗೆ ಮತ್ತು ಹಿಂದೂ ಹಾಗೂ ಮುಸ್ಲಿಂ ಮೂಲಭೂತವಾದಿಗಳಿಗೆ ಮಾತ್ರ. ಶ್ರೀಸಾಮಾನ್ಯರಿಗೆ ಬೇಕಾಗಿರುವುದು ಬಡತನ ನಿರ್ಮೂಲನೆ ಮತ್ತು ದೇಶದ ಅಭಿವೃದ್ಧಿ.ಇದನ್ನು ಸಾರುವುದಕ್ಕೆ ಮಾಧ್ಯಮಗಳು ಮುಂದಾಗಬೇಕು.

ಆಗಿರುವ ಗಾಯವನ್ನು ಮತ್ತೆ ಮತ್ತೆ ಕೆರೆದು ವ್ರಣ ಮಾಡುವುದಕ್ಕಿಂತ ಅದಕ್ಕೆ ಮುಲಾಮು ಹಚ್ಚುವ ಕೆಲಸ ಮಾಡಿದರೆ ಎಷ್ಟೋಪಟ್ಟು ಒಳ್ಳೆಯದಲ್ಲವೆ? ಮತಾಂಧರಾಗಿ ಕುರುಡರಾಗುವುದಕ್ಕಿಂತ ನಮ್ಮನ್ನು ನಾವು ಕಂಡುಕೊಂಡು ಮನುಷ್ಯರಾಗಬೇಕಾಗಿದೆ. ದೇವನೂರರು ಹೇಳುವಂತೆ, ಸಹಿಷ್ಣುತೆಗಾಗಿ ಹೆಚ್ಚು ಮಾತನಾಡಬೇಕಾಗಿದೆ.

– ಸಾಭಾರ ಸಂವಾದ

ಫಲತ್ಯಾಗಿಗೆ ಅನಂತಫಲ

– ವಿನೋಬಾ

ಕರ್ಮಯೋಗದಲ್ಲಿ ಫಲತ್ಯಾಗವೇ ಮಹತ್ವದ ವಸ್ತು. ಫಲಸಿದ್ಧಿ ಇದೆಯೋ ಇಲ್ಲವೋ? ಎಂಬುದಕ್ಕೆ ಮೂರನೆಯ ಅಧ್ಯಾಯ ಉತ್ತರ ಕೊಡುತ್ತದೆ ಫಲತ್ಯಾಗಿಯಾದ ಕರ್ಮಯೋಗಿಗೆ ಅನಂತಫಲ.

ನನಗೆ ಲಕ್ಷ್ಮೀಯ ಸಂಗತಿ ನೆನಪಾಗುತ್ತದೆ. ಆಕೆಯ ಸ್ವಯಂವರ ನಡೆದಿತ್ತು. ದೇವದಾನವರೆಲ್ಲ ಆಸೆಯಿಂದ ಬಂದಿದ್ದರು. ಲಕ್ಷ್ಮಿ ಪಣವನ್ನು ಹೊರಪಡಿಸಿರಲಿಲ್ಲ. ಸಭಾಮಂಟಪಕ್ಕ ಬಂದು 'ಯಾರಿಗೆ ನನ್ನ ಮೇಲೆ ಇಷ್ಟವಿಲ್ಲವೋ ಅವರಿಗೆ ಮಾಲೆ ಹಾಕುತ್ತೇನೆ'ಎಂದಳು. ಎಲ್ಲರಿಗೂ ಲಾಲಾಸೆಯೆ. ಲಕ್ಷ್ಮಿ ತನ್ನ ಆಸೆಯಿಲ್ಲದ ವರನನ್ನು ಹುಡುಕಿದಳು. ಶೇಷನ ಮೇಲೆ ಶಾಂತವಾಗಿ ಮಲಗಿದ ವಿಷ್ಣುವಿನ ಮೂರ್ತಿ ಆಕೆಯ ಕಣ್ಣಿಗೆ ಬಿತ್ತು. ಅವನ ಕೊರಳಿಗೆ ಮಾಲೆ ಹಾಕಿ ಅವನ ಪದತಲದಲ್ಲಿ ಇನ್ನೂ ಕೂತಿದ್ದಾಳೆ. 'ಬೆಡದವಗಾದಳು ತೊತ್ತು ಭಾಗ್ಯಲಕ್ಷ್ಮಿ.' ಇದೇ ಕೌಶಲ!

ಸಾಮಾನ್ಯ ಮನುಷ್ಯ ತನ್ನ ಫಲದ ಸುತ್ತ ಬೇಲಿ ಕಟ್ಟುತ್ತಾನೆ. ಆದ್ದರಿಂದ ಅನಂತವಾಗಿ ಸಿಗುವ ಫಲವನ್ನು ಕಳೆದುಕೊಳ್ಳುತ್ತಾನೆ. ಸಾಂಸಾರಿಕ ಮನುಷ್ಯ ಅಪಾರ ಕರ್ಮಮಾಡಿ ಅಲ್ಪ ಫಲ ಗಳಿಸುತ್ತಾನೆ. ಅದೇ ಕರ್ಮಯೋಗಿ ಸ್ವಲ್ಪ ಕರ್ಮಮಾಡಿ ಅಪಾರ ಫಲ ಗಳಿಸುತ್ತಾನೆ. ಈ ವ್ಯತ್ಯಾಸ ಒಂದೇ ಒಂದು ಭಾವನೆಯಿಂದ ಆಗುತ್ತದೆ. ಟಾಲ್‌ಸ್ಟಾಯ್ ಒಂದೆಡೆ ಹೇಳಿದ್ದಾನೆ: "ಲೋಕ, ಕ್ರಿಸ್ತನ ತ್ಯಾಗವನ್ನು ಸುತ್ತಿಸುತ್ತದೆ. ಆದಗೆ ಸಂಸಾರಿ ಜೀವ ದಿನವೂ ಎಷ್ಟು ನೆತ್ತರ ಇಂಗಿಸುತ್ತದೆ, ಕಡುಕಷ್ಟ ಸಹಿಸುತ್ತದೆ! ಎರಡೆರಡು ಕತ್ತೆಯ ಹೊರೆಹೊತ್ತು ಬದುಕು ನೀಗಿಸುವ ಈ ಸಂಸಾರಜೀವಿ ಕ್ರಿಸ್ತನಿಗಿಂತಲೂ ಎಷ್ಟು ಹೆಚ್ಚು ಕಷ್ಟ, ಎಷ್ಟು ಸಂಕಟ ಅನುಭವಿಸುತ್ತದೋ, ಇದರಲ್ಲಿ ಅರ್ಧದಷ್ಟನ್ನಾದರೂ ಧೇವರಿಗಾಗಿ ಸೇರಿಸಿದರೆ ಕ್ರಿಸ್ತನಿಗಿಂತ ದೊಡ್ಡದಾದೀತು ಈ ಜೀವ!"

ಸಂಸಾರಿಯ ತಪಸ್ಸು ದೊಡ್ಡದು. ಆದರೆ ಅದು ಕ್ಷುದ್ರ ಫಲಕ್ಕಾಗಿ. ವಾಸನೆಯಿದ್ದಂತೆ ಫಲ ನಮ್ಮ ಪದಾರ್ಥಕ್ಕೆ ನಾವು ಕೊಟ್ಟಷ್ಟು ಬೆಲೆಯನ್ನು ಜನ ಕೊಡರು. ಸುಧಾಮ ದೇವರ ಬಳಿಗೆ ಅವಲಕ್ಕಿ ಕೊಂಡೊಯ್ದ. ಆ ಹಿಡಿ ಅವಲಕ್ಕಿ ಒಂದು ಹಿಡಿಕಾಸಿನದೂ ಅಲ್ಲ. ಆದರೆ ಸುಧಾಮನಿಗೆ ಅದು ಬೆಲೆಯಿಲ್ಲದ್ದು ಆ ಅವಲಕ್ಕಿಯಲ್ಲಿ ಭಕ್ತಿ ತುಂಬಿತ್ತು. ಅದು ಮಂತ್ರಿಸಿದ ಅವಲಕ್ಕಿ

ಆ ಅವಲಕ್ಕಿಯಲ್ಲಿ ಕಣಕಣದಲ್ಲೂ ಭಾವನೆಯಿತ್ತು, ಪದಾರ್ಥ ಚಿಕ್ಕದು. ಆದರೂ ಮಂತ್ರ ಅದನ್ನು ದೊಡ್ಡದನ್ನು ಮಾಡಿತು. ನೋಟುಗಳ ತೂಕ ಎಷ್ಟು? ಸುಟ್ಟರೆ ಒಂದು ಹನಿ ನೀರೂ ಕಾಯಲಿಕ್ಕಿಲ್ಲ. ಆದರೆ ಅದರ ಮೇಲೆ ಮುದ್ರೆ ಇದೆ. ಆ ಮುದ್ರೆಯಿಂದ ಅದರ ಬೆಲೆ. ಕರ್ಮಯೋಗದ ಜಾಣ್ಮೆ ಇದೇ ರೀತಿ. ಕರ್ಮ ನೋಟು ಇದ್ದಂತೆ. ಭಾವನೆಯ ಮುದ್ರೆಗೆ ಬೆಲೆಯುಂಟು. ಬರೀ ಕರ್ಮಕ್ಕೆ ಬೆಲೆಯಿಲ್ಲ. ಇದೊಂದು ಬಗೆಯಲ್ಲಿ ಮೂರ್ತಿ ಪೂಜೆಯ ರಹಸ್ಯ. ಮೂರ್ತಿ ಪೂಜೆಯ ಕಲ್ಪನೆ ಅತ್ಯಂತ ಸುಂದರವಾದುದು. ವಿಗ್ರಹವನ್ನು ತುಂಡುಮಾಡಬಲ್ಲವರಾರು? ಮೊದಲು ತುಂಡು ತುಣುಕಾಗಿದ್ದುದೆ ತಾನೇ ಈ ವಿಗ್ರಹ ? ನಾನದರಲ್ಲಿ ಜೀವ ತುಂಬಿದೆ. ನನ್ನ ಭಾವನೆ ತುಂಬಿತು. ಭಾವನೆಯನ್ನು ತುಂಡು ಮಾಡಲು ಸಾಧ್ಯವೆ? ಕಲ್ಲು ತುಂಡಾದೀತು, ಭಾವನೆಯಲ್ಲ. ವಿಗ್ರಹದಿಂದ ನನ್ನ ಭಾವನೆ ಮಾಯವಾದರೆ ಅದು ಬರೀ ಕಲ್ಲಾಗಿ ತುಂಡಾಗುತ್ತದೆ.

ಕರ್ಮ ಎಂದರೆ ಕಲ್ಲು, ತಾಯಿ ಸೊಟ್ಟಸೊಟ್ಟಾಗಿ ನಾಲ್ಕು ಸಾಲು ಕಾಗದದ ಮೇಲೆ ಬರೆದು ಕಳುಹಿಸಿದರು ಎನ್ನಿ. ಇನ್ನೊಬ್ಬರು ಐವತ್ತು ಹಾಳೆ ಏನಾದರೂ ಬರೆದು ಅರ್ಧ ಸೇರು ತೂಕದಷ್ಟು ಕಾಗದ ಕಳಿಸಿದರೆ ಅದರ ತೂಕ ಹೆಚ್ಚಾಯಿತೆ? ತಾಯಿ ಗೀಚಿದ ನಾಲ್ಕು ಸಾಲು ಭಾವನಾ ಭರಿತ , ಪವಿತ್ರ, ಅಮೂಲ್ಯ. ಅದರ ಬೆಲೆ ಉಳಿದ ಕಾಗದಕ್ಕೆ ಬಂದೀತೆ? ಕರ್ಮಕ್ಕೆ ತಂಪೂ ಬೇಕು, ಭಾವನೆಯೂ ಬೇಕು. ಕೂಲಿಯವನು ಕೆಲಸ ಮಾಡಿದರೆ ಅದಕ್ಕೆ ಬೆಲೆ ಕಟ್ಟಿ ರೊಕ್ಕ ತೆಗೆದುಕೊಂಡು ಹೋಗು ಎನ್ನುತ್ತೇವೆ. ಆದರೆ ದಕ್ಷಿಣೆಯ ಮಾತು ಹಾಗಲ್ಲ. ದಕ್ಷಿಣೆಯನ್ನು ನೆನೆಯಿಸಿ ಕೊಡುತ್ತೇವೆ. ಎಷ್ಟ ದಕ್ಷಿಣೆ ಕೊಟ್ಟರಿ ಎಂಬ ಪ್ರಶ್ನೆಯಿಲ್ಲ. ಅದರಲ್ಲಿ ತೇವ ಇದೆಯೆ ಎಂಬುದು ಪ್ರಶ್ನೆ. ಮನುಸ್ಮೃತಿಯಲ್ಲಿ ಒಂದು ದೊಡ್ಡ ವಿನೋಧವಿದೆ. ಹನ್ನೆರಡು ವರ್ಷ ಗುರುಗೃಹದಲ್ಲಿ ಕಳೆದು ಪಶುವಾಗಿದ್ದವನು ಮನುಷ್ಯನಾದ. ಶಿಷ್ಯ ಗುರುವಿಗೆ ಏನು ಕೊಡಬಲ್ಲ? ಪೂರ್ವಕಾಲದಲ್ಲಿ ಮೊದಲೇ ರುಸುಂ ತೆಗೆದುಕೊಳ್ಳುತ್ತಿದ್ದಿಲ್ಲ. ೧೨ ವರ್ಷ ಕಲಿತ ಮೇಲೆ ಏನು ಕೊಡಬೇಕಾದೀತೋ ಅದನ್ನು ಆಮೇಲೆ ಕೊಡಬೇಕಾಗುತ್ತಿತ್ತು. ಮನು ಹೇಳುತ್ತಾನೆ. 'ಕೊಡು ಗುರುವಿಗೆ ಒಂದು ಹೂ, ಒಂದು ಬೀಸಣಿಗೆ, ಒಂದು ಜೊತೆ ಆವಿಗೆ, ಒಂದು ನೀರು ತುಂಬಿದ ತಂಬಿಗೆ.' ಇದು ಚೇಷ್ಟೆಯಲ್ಲ. ಕೊಡಬೇಕಾದುದನ್ನು ಶ್ರದ್ಧೆಯ ಚಿಹ್ನೆಯೆಂದು ಕೊಡಬೇಕು. ಹೂವಿಗೆ ತೂಕವಿಲ್ಲ. ಅದರಲ್ಲಿ ಹಡಗಿದ ಭಕ್ತಿಗೆ ಬ್ರಹ್ಮಾಂಡದಷ್ಟು ತೂಕವಿದೆ. ರುಕ್ಮಿಣಿ ಒಂದು ತುಲಸೀದಳದಿಂದ ಗಿರಿಧರನನ್ನು ತೂಗಿದಳು. ಸತ್ಯಭಾಮೆಯ ಮಣಮಣ

ಒಡವೆಗಳಿಂದ ಕೆಲಸವಾಗಲಿಲ್ಲ. ಭಾವಭಕ್ತ ಭರಿತವಾದ ಒಂದು ತುಳಸೀದಳವನ್ನು ರುಕ್ಮಿಣಿ ತಕ್ಕಡಿಯಲ್ಲಿ ಹಾಕಲು ಕೆಲಸವಾಯಿತು. ಆ ದಳ ಮಂತ್ರಿತವಾದದು; ಬರೀ ದಳವಾಗಿರಲಿಲ್ಲ. ಕರ್ಮಯೋಗಿಗಳ ಕರ್ಮವೂ ಹೀಗೆಯೇ.

ಗಂಗೆಯಲ್ಲಿ ಇಬ್ಬರು ಸ್ನಾನಕ್ಕೆ ಹೋಗಿದ್ದಾರೆ ಎನ್ನಿ, ಒಬ್ಬ-ಗಂಗೆ ಎಂದರೆ ಏನು? ಒಂದು ಭಾಗ ಪ್ರಾಣವಾಯು, ಎರಡು ಭಾಗ ಜಲಜನಕ, ಎರಡು ಸೇರಿ ನೀರು ಎಂದ. ಇನ್ನೊಬ್ಬ ಹೇಳಿದ ''ಇದು ಭಗವಾನ್ ವಿಷ್ಣುವಿನ ಪದಕಮಲದಲ್ಲಿ ಹುಟ್ಟಿದುದು; ಶಂಕರನ ಜಟಾಜೂಟದಲ್ಲಿ ಸೇರಿದುದು; ಇದರ ತೀರದಲ್ಲಿ ಸಾವಿರಾರು ಋಷಿಮುನಿಗಳು ತಪಸ್ಸು ಮಾಡಿದ್ದಾರೆ; ಎಷ್ಟೋ ಪುಣ್ಯಕೃತ್ಯಗಳ ಭಾಗ್ಯ ಇದಕ್ಕಿದೆ. ಇಂಥ ಪವಿತ್ರ ಗಂಗಾಮಾತೆ!' ಈ ಭಾವನೆಯಿಂದ ತುಂಬಿ ಅವನು ಸ್ನಾನಮಾಡಿದ. ಆಕ್ಸಿಜನ್ ಹೈಡ್ರೋಜನ್‌ವಾಲಾನು ಸ್ನಾನಮಾಡಿದ. ಇಬ್ಬರಿಗೂ ಮೈತೊಳೆಯಿತು. ದೇಹಶುದ್ಧಿಯ ಫಲದ ಯೋಚನೆಯೇ ಇಲ್ಲದವನಿಗೂ ಆ ಫಲ ದೊರೆಯಿತು. ಗಂಗೆಯಲ್ಲಿ ಎತ್ತೂ ಮೈ ತೊಳೆದಾವು. ಮನಸ್ಸಿನ ಹೊಲಸು ಹೋಗಬೇಕು ಹೇಗೆ? ಒಬ್ಬನಿಗೆ ಮೈತೊಳೆಯುವ ಚಿಲ್ಲರೆಫಲ ಸಿಕ್ಕಿತು. ಇನ್ನೊಬ್ಬನಿಗೆ ಇದರ ಜೊತೆಗೆ ಚಿತ್ತಶುದ್ಧಿಯ ಅಮೂಲ್ಯ ಫಲವೂ ಸಿಕ್ಕಿತು.

ಸ್ನಾನಮಾಡಿ ಸೂರ್ಯನಮಸ್ಕಾರ ಹಾಕಿದರೆ ವ್ಯಾಯಾಮದ ಫಲವಂತೂ ಸಿಕ್ಕೇ ಸಿಗುತ್ತದೆ. ಆರೋಗ್ಯಕ್ಕಾಗಿ ನಮಸ್ಕಾರ ಮಾಡುವುದಿಲ್ಲ; ಉಪಾಸನೆಗಾಗಿ. ಅದರಿಂದ ಮೈಗೆ ಆಗುವ ಲಾಭವಂತೂ ಇದ್ದೇ ಇದೆ; ಬುದ್ಧಿಯ ಪ್ರಭೆಯೂ ಅರಳುತ್ತದೆ. ಆರೋಗ್ಯದ ಜೊತೆಗೆ ಪ್ರತಿಭೆಯೂ ಸ್ಫೂರ್ತಿಯೂ ಸೂರ್ಯನಿಂದ ದೊರೆತೀತು.

ಕರ್ಮವೇನೋ ಅದೇ. ಭಾವನಾಭೇದದಿಂದ ಬೆಲ ವ್ಯತ್ಯಾಸವಾಗುತ್ತದೆ. ಪಾರಮಾರ್ಥಿ ಮನುಷ್ಯನ ಕರ್ಮ ಆತ್ಮವಿಕಾಸಕವಾಗುತ್ತದೆ; ಸಂಸಾರಿಯ ಕರ್ಮ ಆತ್ಮ ಬಂಧಕವಾಗುತ್ತದೆ. ಕರ್ಮಯೋಗಿ ಒಕ್ಕಲಿಗನಾದರೆ ಬೇಸಾಯವನ್ನು ಸ್ವಧರ್ಮವೆಂದು ಮಾಡುತ್ತಾನೆ. ಅದರಿಂದ ಅವನ ಹೊಟ್ಟೆಗೆ ಹಿಟ್ಟು ಸಿಗುತ್ತದೆ. ಆದರೆ ಹಿಟ್ಟಿಗಾಗಿ ಅವನು ಆ ಕರ್ಮವನ್ನು ಮಾಡ. ಬೇಸಾಯ ಮಾಡಲಿಕ್ಕೆ ಎಂದು ಹಿಟ್ಟು ಅವನಿಗೆ ಸಾಧನವಾದೀತು.ಸ್ವದರ್ಮವೇ ಗುರಿ; ಅನ್ನ ಅದಕ್ಕೆ ದಾರಿ. ಉಳಿದ ಬೇಸಾಯಗಾರರಿಗೆ ಹಿಟ್ಟೇ ಗುರಿ; ಬೇಸಾಯದ ಸ್ವಧರ್ಮವೇ ಸಾಧನ. ಹೀಗೆ ಅವರು ತಿರುಗುಮುರುಗರು. ಎರಡನೆ ಅಧ್ಯಾಯದಲ್ಲಿ ಸ್ಥಿತಪ್ರಜ್ಞನ ಲಕ್ಷಣದಲ್ಲಿ ಇದನ್ನು ಸ್ವಾರಸ್ಯವಾಗಿ ಹೇಳಿದೆ: ಇತರರು ಎಚ್ಚೆತ್ತಾಗ ಕರ್ಮಯೋಗಿಗೆ ನಿದ್ದೆ; ಅವರು ಮಲಗಿದಾಗ ಇವನಿಗೆ ಎಚ್ಚರ. ಹೊಟ್ಟೆಗೆ ಸಿಕ್ಕಿತೋ ಇಲ್ಲವೋ

ಎಂದು ನಾವು ಜಾಗರೂಕರಾದರ, ಕರ್ಮಯೋಗಿಗೆ ತನ್ನ ಕರ್ಮದಲ್ಲಿ ಒಂದು ಗಳಿಗೆಯೂ ವ್ಯರ್ಥವಾಗಬಾರದು ಎಂಬುದರಲ್ಲಿ ಎಚ್ಚರ, ವಿಧಿಯಿಲ್ಲವೆಂದು ಅವನು ತಿನ್ನುತ್ತಾನೆ. ಈ ಗಡಿಗೆಗೆ ಏನಾದರೂ ತುಂಬಲೇಬೇಕಲ್ಲ ಎಂದು ತುಂಬುತ್ತಾನೆ. ಸಂಸಾರಿಗಳಿಗೆ ಉಣ್ಣುವಾಗ ಆನಂದವಾಗುತ್ತದೆ. ಯೋಗಿಗೆ ಉಣ್ಣುವಾಗ ಕಷ್ಟವಾಗುತ್ತದೆ. ಅಂತೇ ಅವನು ಚಪ್ಪರಿಸಿ ಲಟಿಕೆಹಾಕಿ ಉಣ್ಣುವುದಿಲ್ಲ. ಸಂಯಮ ಕಾಯ್ದುಕೊಂಡಾನು. ಒಬ್ಬರ ಇರುಳು ಇನ್ನೊಬ್ಬರಿಗೆ ಹಗಲು; ಒಬ್ಬರ ಹಗಲು ಇನ್ನೊಬ್ಬರಿಗೆ ಇರುಳು. ಒಬ್ಬರ ಆನಂದ ಇನ್ನೊಬ್ಬರ ದುಃಖ, ಒಬ್ಬರ ದುಃಖ ಇನ್ನೊಬ್ಬರ ಆನಂದ. ಸಂಸಾರಿ, ಕರ್ಮಯೋಗಿ ಇಬ್ಬರ ಕರ್ಮವೂ ಒಂದೇ ಬಗೆ. ಕರ್ಮಯೋಗಿ ಫಲಾಸಕ್ತಿಯನ್ನು ಬಿಟ್ಟು ಕರ್ಮದಲ್ಲೇ ರಮಿಸುತ್ತಾನೆಂಬುದೇ ಮುಖ್ಯ. ಸಂಸಾರಿಯಂತೆ ಯೋಗಿಯೂ ತಿನ್ನುತ್ತಾನೆ, ಕುಡಿಯುತ್ತಾನೆ, ಮಲಗುತ್ತಾನೆ. ಆದರೆ ಅವನ ಭಾವನೆಯೇ ಬೇರೆ. ಎಂತಲೇ ಹದಿನಾರು ಅಧ್ಯಾಯಗಳು ಇದ್ದರೂ ಸ್ಥಿತಪ್ರಜ್ಞನ ಸಂಯಮಮೂರ್ತಿಯನ್ನು ಇದಿರಿಗೆ ಕರೆದು ನಿಲ್ಲಿಸಿದೆ.

ಆದರಿಂದಲೇ ಸಂಸಾರಿ□ಕರ್ಮಯೋಗಿಗಳ ಕರ್ಮದಲ್ಲಿ ಸಾಮ್ಯ-ವೈಷಮ್ಯ ಕಾಣಬರುತ್ತದೆ. ಕರ್ಮಯೋಗಿ ಗೋರಕ್ಷಣೆ ಮಾಡುತ್ತಾನೆ ಎನ್ನಿ. ಯಾವ ಉದ್ದೇಶದಿಂದ ಮಾಡುತ್ತಾನೆ? ಗೋ ಸೇವೆ ಮಾಡಿ ಸಮಾಜಕ್ಕೆ ಹೇರಳವಾಗಿ ಹಾಲು ಒದಗಿಸೋಣ, ಮನುಷ್ಯನಿಗಿಂತ ಕೆಳಗಿನ ಪ್ರಾಣಿ ವರ್ಗದಲ್ಲಿ ಗೋವಿಗಾದರೂ ಪ್ರೀತಿ ತೋರಿಸೋಣ ಎಂದು ಅವನು ಗೋರಕ್ಷಣೆ ಮಾಡಿಯಾನು; ಸಂಬಳಕ್ಕಾಗಿ ಮಾಡಲಾರ. ಸಂಬಳ ಸಿಕ್ಕೀತು. ಆದರೆ ಆನಂದ ಮಾತ್ರ ಭಾವನೆ ನೀಡುವ ದಾನ!

ಕರ್ಮಯೋಗಿಯ ಕರ್ಮ ವಿಶ್ವದೊಡನೆ ತಾನು ಸಮರಸವಾಗುತ್ತದೆ. ತುಲಸಿಗೆ ನೀರು ಹನಿಸದೆ ಊಟ ಮಾಡಬಾರದು ಎಂದು ಕೆಲವರ ನಿಯಮ. ವನಸ್ಪತಿ ಸೃಷ್ಟಿಯೊಡನೆ ಪ್ರೀತಿಯ ಎಳೆಗೂಡಿಸಿದ ಸಂಬಂಧ ಇದು. ತುಲಸಿ ಹಸಿದಿದ್ದ ನಾನು ಉಣ್ಣಲೇ? ಗೋವಿನೊಡನೆ ಏಕರೂಪ, ಗಿಡಮರದೊಡನೆ ಏಕರೂಪ. ಹೀಗೆ ಮಾಡುತ್ತಾ ವಿಶ್ವದ ಏಕರೂಪ ಅನುಭವಕ್ಕೆ ಬರುತ್ತದೆ. ಭಾರತ ಯುದ್ಧದಲ್ಲಿ ಸಂಜೆಗೆ ಎಲ್ಲರೂ ಸಂಧ್ಯಾವಂದನೆ ಮಾಡಲು ಹೋಗುತ್ತಿದ್ದರು. ಆದರೆ ಶ್ರೀಕೃಷ್ಣನೋ ರಥಕ್ಕೆ ಕಟ್ಟಿದ ಕುದುರೆಗಳನ್ನು ಬಿಚ್ಚಿ ನೀರು ಕುಡಿಸಲು ಕರೆದೊಯ್ಯುತ್ತಿದ್ದ. ಅವುಗಳ ಮೈತಿಕ್ಕುತ್ತಿದ್ದ. ಮೈಗೆ ನಿಟ್ಟಿದ್ದ ಬಾಣಗಳನ್ನು ತೆಗೆಯುತ್ತಿದ್ದ. ಆ ಸೇವೆಯಲ್ಲಿ ಭಗವಂತನಿಗೆ ಎಷ್ಟು ಆನಂದವೋ! ಇದನ್ನು ಎಷ್ಟು ವರ್ಣಿಸಿದರೂ ಕವಿಗೆ ತೃಪ್ತಿಯಿಲ್ಲ. ಪೀತಾಂಬರದಲ್ಲಿ ಹಾಕಿ

ಕುದುರೆಗೆ ಹುರುಳಿ ತಿನ್ನಿಸುತ್ತಿದ್ದ ಪಾರ್ಥಸಾರಥಿ ಕಣ್ಣಿದಿರಿಗೆ ಬರಬೇಕು, ಆಗ ಕರ್ಮಯೋಗದ ಆನಂದವನ್ನು ಅರಿಯಬೇಕು. ಪ್ರತಿಯೊಂದು ಕರ್ಮವೂ ಆಧ್ಯಾತ್ಮಿಕ ಕರ್ಮ, ಉಚ್ಚತರ ಪಾರಮಾರ್ಥಿಕ ಕರ್ಮ. ಖಾದಿ ಕೆಲಸವನ್ನು ನೋಡಿ. ಹೆಗಲ ಮೇಲೆ ಖಾದಿ ಹೊತ್ತು ಅಲೆದಾಡುವುದು ಬೇಸರವಲ್ಲವೆ? ಇಲ್ಲ. ಎಷ್ಟೋ ಕೋಟಿ ಜನರೆಹೊಟ್ಟೆಯ ಅಣ್ಣ ತಮ್ಮಂದಿರಿದ್ದಾರೆ. ಅವರಿಗೆ ಒಂದು ತುತ್ತು ಕೊಡಬೇಕು ಎಂಬ ಯೋಚನೆಯಲ್ಲಿ ಅವನು ಮುಳುಗಿರುತ್ತಾನೆ. ಒಂದು ಗಜ ಖಾದಿ ಮಾರುವುದೂ ಕೂಡ ಅವನಿಗೆ ದರಿದ್ರ ನಾರಾಯಣನ ಪೂಜೆ.

ನಿಷ್ಕಾಮ ಕರ್ಮಯೋಗದಲ್ಲಿ ಅದ್ಭುತ ಸಾಮರ್ಥ್ಯವಿದೆ. ಆ ಕರ್ಮದಿಂದ ವ್ಯಕ್ತಿಗೂ ಸಮಾಜಕ್ಕೂ ಪರಮ ಕಲ್ಯಾಣವಾಗುತ್ತದೆ. ಸ್ವಧರ್ಮಾಚರಣೆ ಮಾಡುವ ಕರ್ಮಯೋಗಿಯ ಶರೀರಯಾತ್ರೆ ನಡೆದೇ ನಡೆಯುತ್ತದೆ. ಶಿಸ್ತಿನಿಂದ ಉದ್ಯೋಗ ಮಾಡುವುದರಿಂದ ಮೈ ನಿರೋಗಿಯೂ ಸ್ವಚ್ಛವೂ ಆಗಿರುತ್ತದೆ. ಅವನ ಕರ್ಮದಿಂದ ಅವನ ಸುತ್ತಲಿನ ಸಮಾಜದ ಯೋಗಕ್ಷೇಮವೂ ಚೆನ್ನಾಗಿ ನಡೆಯುತ್ತದೆ. ಹೆಚ್ಚು ಹಣ ದೊರೆತೀತೆಂದು ಕರ್ಮಯೋಗಿಯಾದ ಒಕ್ಕಲಿಗ ಅಫೀಮನ್ನೂ ಹೊಗೆಸೊಪ್ಪನ್ನೂ ಬೆಳೆಸಿಯಾನೆ? ಅವನ ಕರ್ಮ ಸಮಾಜದ ಕಲ್ಯಾಣಕ್ಕಾಗಿ ಮಾಡಿದುದು. ಸ್ವಧರ್ಮರೂಪಿ ಕರ್ಮ ಯಾವಾಗಲೂ ಸಮಾಜಕ್ಕೆ ಲಾಭಕಾರಿಯೆ. ನನ್ನ ವ್ಯಾಪಾರ ಜನರ ಹಿತಕ್ಕಾಗಿ ಎಂಬ ವ್ಯಾಪಾರಿ ಪರದೇಶಿ ಬಟ್ಟೆ ಮಾರಾಟಕಿಲ್ಲ. ಅವನ ವ್ಯಾಪಾರ ಸಮಾಜೋಪಕಾರವಾದೀತು. ತನ್ನನ್ನು ಮರೆತು ನೆರೆಹೊರೆಯ ಸಮಾಜದಲ್ಲಿ ಬೆರೆತು ಹೋಗುವ ಕರ್ಮಯೋಗಿ ಯಾವ ಸಮಾಜದಲ್ಲಿರುತ್ತಾನೋ ಅಂಥ ಸಮಾಜದಲ್ಲಿ ಸುವ್ಯವಸ್ಥೆ, ಸಮೃದ್ಧಿ, ಸಾಮರಸ್ಯ ಇರುತ್ತದೆ.

– ಮುಂದುವರಿಯುವುದು

ದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿ "ಭಾರತ ರತ್ನ" ಕ್ರಿಕೆಟ್ ಆಟಗಾರರಿಗೆ, ಸಿನಿಮಾ ಮಂದಿಗೆ ನೀಡುವುದು ತಪ್ಪು ಎಂಬುದು ನನ್ನ ಭಾವನೆ. ಸಚಿನ್ ತೆಂಡೂಲ್ಕರ್, ಲತಾ ಮಂಗೇಶ್ಕರ್, ಇಬ್ಬರು ಭಾರತ ರತ್ನಗೆ ಅರ್ಹರಲ್ಲ. ಇಬ್ಬರು ತಮ್ಮ ಜನಪ್ರಿಯತೆಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಜನರ ಅಗತ್ಯಗಳಿಗಿಂತ ತಮ್ಮ ಅಗತ್ಯ ಹೆಚ್ಚೆಂದು ತಿಳಿಯುವುದು ಸರಿಯೇ? ಅವರು ಅ ಬಗ್ಗೆ ಕಾಳಜಿ ಇಲ್ಲದಂತೆ ಇದ್ದಾರೆ

- ಅಕರ್ ಪಟೇಲ್ (ಪ್ರಜಾವಾಣಿ ದಿನಪತ್ರಿಕೆ)

ಸಂಪೂರ್ಣಕ್ರಾಂತಿ ದಿನದ ಸ್ಮರಣೆಯಲ್ಲಿ

(ಅ ಭಾ ಸರ್ವೋದಯ ಮಂಡಲದ ಅಧ್ಯಕ್ಷರ ಸಂದೇಶ)

೧೯೭೪ರ ಉದ್ಘೋಷಣೆ "ಸಂಪೂರ್ಣಕ್ರಾಂತಿ ಈಗಿನ ಘೋಷಣೆ, ಭಾವಿ, ಇತಿಹಾಸ ನಮ್ಮದು." ಜಯಪ್ರಕಾಶ್ ನಾರಾಯಣರಿಗೆ ಸಂಪೂರ್ಣಕ್ರಾಂತಿಯನ್ನು ಭೂಮಿಯ ಮೇಲೆ ಇಳಿಸಲು ಅವಕಾಶ ದೊರೆಯಲಿಲ್ಲ. ಜೆ.ಪಿ ಹೋಗಿ ೩೭ ವರ್ಷಗಳಾಗಿವೆ. ಆದ್ದರಿಂದ ಈಗ ಆ ಕೆಲಸದ ಜವಾಬ್ದಾರಿ ಸಂಪೂರ್ಣ ಕ್ರಾಂತಿಯ ಸೈನಿಕರ ಹೆಗಲ ಮೇಲಿದೆ. ಸಂಪೂರ್ಣ ಕ್ರಾಂತಿಯೆಂಬುದು ಕೇವಲ ರಾಜ್ಯಾಧಿಕಾರವನ್ನು ಬದಲಿಸುವುದಲ್ಲ, ಮೌಲ್ಯಗಳಲ್ಲಿ ಮತ್ತು ಸಂಬಂಧಗಳಲ್ಲಿ ಪರಿವರ್ತನೆಯಾದಾಗ ಕ್ರಾಂತಿಯಾಗುತ್ತದೆ. ಇದಕ್ಕಾಗಿ ಒಂದು ಜನ್ಮಕೂಡ ಕಡಿಮೆಯೇ.

ಆದ್ದರಿಂದ ಇಂದಿನ ಘೋಷಣೆ -

ನಮ್ಮ ಗುರಿ ಸಂಪೂರ್ಣಕ್ರಾಂತಿ, ಅರ್ಪಣೆ ನಮ್ಮೀ ಜೀವನವಿಡಿ.

ಸ್ವಾತಂತ್ರ್ಯ ಆಂದೋಲನದ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀ ಧೀರೇಂದ್ರ ಮಜುಮ್ದಾರ್ ಎಂಬುವವರನ್ನು ಒಬ್ಬರು ಹೀಗೆ ಕೇಳಿದರು: "ಯುವಕರು ತಮ್ಮ ಇಡೀ ಸಮಯವನ್ನು ಚರಕ ಸಂಘಕ್ಕೆ ಕೊಟ್ಟರೆ, ಸಮರ್ಪಿಸಿದರೆ ಅವರಿಗೇನು ದೊರೆಯುವುದು?" ಅದಕ್ಕೆ ಧೀರೇಂದ್ರ ಮಜುಮ್‌ದಾರರು ಹೀಗೆ ಉತ್ತರ ಕೊಟ್ಟರು: "ಕ್ರಾಂತಿಕಾರಿಗಳಿಗೆ ಇತಿಹಾಸದಲ್ಲಿ ಯಾವಾಗಲೂ ಏನು ದೊರೆಯುತ್ತದೋ, ಅದು. ಅವರಿಗೆ ಕಷ್ಟ ದೊರೆಯುವುದು, ಸಮಾಜದ ಉಪೇಕ್ಷೆ, ಅಪಹಾಸ್ಯ, ವಿರೋಧ ಮತ್ತು ಬಹುಶಃ ದಮನಕೂಡ. ಅವರು ಒಮ್ಮೆ ಹಸಿವಿನಿಂದ ಸತ್ತರೆ, ಇನ್ನೊಂಮ್ಮೆ ರೋಗದಿಂದ." ವ್ಯವಸ್ಥೆಪರಿವರ್ತನೆಯ ಕ್ರಾಂತಿಯಲ್ಲಿ ವ್ಯವಸ್ಥೆಯು ರೂಪಾಂತರವಾಗುವ ಕಾರಣಕ್ಕಾಗಿ ಯಾರಿಗೆ ಹಾನಿಯಾಗುವುದೋ ಅವರು ಸ್ವಾರ್ಥವಶರಾಗಿ ನಿಮ್ಮ ವಿರೋಧ ಮಾಡುವರು. ಮತ್ತು ಯಾರಿಗೆ ಲಾಭವಾಗುತ್ತದೋ ಅವರು ಕೂಡ ಅಜ್ಞಾನ, ಸಂಪ್ರದಾಯವಾದ ಮತ್ತು ಎಚ್ಚರ ತಪ್ಪಿದವರಾಗಿ ವಿರೋಧ ಮಾಡುವರು. "ನೀವು ಹಸಿವೆ ಅಥವಾ ಖಾಯಿಲೆಯಿಂದ ಸತ್ತಲ್ಲಿ ನಿಮ್ಮ ಅಕ್ಕಪಕ್ಕ ಅಂತ್ಯಕ್ರಿಯೆ ಮಾಡುವಂಥವರೂ ಸಿಗಲಿಕ್ಕಿಲ್ಲ."

ಈ ಮೇಲ್ಕಾಣಿಸಿದ ಉಕ್ತಿ ಇಂದು ಸಂಪೂರ್ಣಕ್ರಾಂತಿಯ ಸೈನಿಕರಿಗೂ ನೂರಕ್ಕೆ ನೂರು ಅನ್ವಯಿಸುತ್ತದೆ.

ಮಿತ್ರರೇ, ಜೆ.ಪಿಯವರ ಗುರಿ – ಪಕ್ಷರಹಿತ ಲೋಕತಂತ್ರ. ಎಂಬುದಾಗಿತ್ತು. ಆದರೆ ಇಂದು ನಮ್ಮ ಲೋಕತಂತ್ರ ಪಕ್ಷಗಳ ಸೆರೆಮನೆಯಲ್ಲಿ ಬಂಧಿಯಾಗಿದೆ ಹಾಗು ಜನತೆಯನ್ನು ಕೇವಲ ಮತ ಚಲಾಯಿಸುವ ಯಂತ್ರವೆಂದು ತಿಳಿಯಲಾಗಿದೆ. ಸಹಭಾಗಿ ಲೋಕತಂತ್ರದ ಅಪಹಾಸ್ಯವಾಗುತ್ತಿದೆ.

೧೯೭೪-೭೫ ರಲ್ಲಿ ಶಾಸನವು ಎಷ್ಟೊಂದು ನಿರಂಕುಶವಾಗಿತ್ತೊ ಇಂದು ದಿಲ್ಲಿಯ ಶಾಸನ ಅದಕ್ಕಿಂತಲೂ ಹೆಚ್ಚು ನಿರಂಕುಶ ಮತ್ತು ಅಧಿನಾಯಕವಾದಿ ಆಗಿರುವಂತಿದೆ. ಸರ್ಕಾರದ ತಪ್ಪು ಹೆಜ್ಜೆಗಳನ್ನು ವಿರೋಧಿಸುವವರನ್ನು ರಾಷ್ಟ್ರದ್ರೋಹಿಗಳೆಂದಾಗಲಿ ಅಥವಾ ನಕ್ಸಲಿಯರೆಂದಾಗಲಿ ಕರೆಯಲಾಗುತ್ತದೆ.

ಅಸ್ಪೃಶ್ಯತೆ ಮೊದಲಿಗಿಂತಲೂ ಕಡಿಮೆ ಏನೋ ಆಗಿದೆ, ಆದರೆ ಜಾತಿವಾದವೆಂಬುದು ಮೊದಲಿಗಿಂತಲೂ ಹೆಚ್ಚು ಗಟ್ಟಿ ಮತ್ತು ಅಕ್ರಾಮಣಕಾರಿ ಯಾಗಿದೆ. ಸಂಪ್ರದಾಯವಾದ ಮತ್ತು ಅಂಧವಿಶ್ವಾಸಗಳು ಭಾರತವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡಿವೆ. ಜೆ.ಪಿ ಜಾತಿಪದ್ಧತಿ ಹೊಗಲಾಡಿಸಬೇಕೆಂದೂ, ವರದಕ್ಷಿಣೆ ತೆಗೆದುಕೊಳ್ಳುವುದನ್ನು ಬಿಡಬೇಕೆಂದೂ ಹೇಳಿದಾಗ ಅವರ ಮೇಲೆ ಚಪ್ಪಲಿ ಎಸೆದದ್ದು ನನಗೆ ನೆನಪಿದೆ.

ಮಿತ್ರರೇ, ಇಂದಿನ ವಿಷಮ ಪರಿಸ್ಥಿತಿಯಲ್ಲಿಯೂ ಕೂಡ ನಾವು ನಿಲ್ಲಕೂಡದು, ಬಗ್ಗಕೂಡದು. ಕ್ರಾಂತಿಯ ಸೇನೆಯಲ್ಲಿ ಹೆಚ್ಚು ಯುವಕರನ್ನು ಮತ್ತು ಮಹಿಳೆಯರನ್ನು ಸೇರಿಸಿಕೊಳ್ಳುತ್ತಾ ಮುನ್ನಡೆಯುತ್ತಲೇ ಇರಬೇಕಾಗಿದೆ. ಇಂದು ಪರಿಸ್ಥಿತಿ ಇಷ್ಟೊಂದು ವಿಕರಾಳವಾಗಿರುವಾಗ ಎಲ್ಲ ಸಹವಿಚಾರದ ಮಿತ್ರರಲ್ಲಿ, ಸಂಘಟನೆಗಳಲ್ಲಿ ನನ್ನ ನಮ್ರ ವಿನಂತಿ ಏನೆಂದರೆ ಸಣ್ಣಪುಟ್ಟ ಮತಭೇದ ಹಾಗೂ ವಿವಾದಗಳನ್ನು ಮರೆತು ಹೊಸ ಸಮಾಜದ ನಿರ್ಮಾಣದಲ್ಲಿ ಸಂಘಟಿತ ಶಕ್ತಿಯನ್ನು ತೊಡಗಿಸಬೇಕು.

– ಮಹಾದೇವ ವಿದ್ರೋಹಿ

ಚಿಂತನೆಗೊಂದು ಸಂಗತಿ

ಪರ್ಯಾಯ ಎಂಥದು?

ಇಂದು ಎಲ್ಲೆಲ್ಲೂ ಈಗಿರುವ ಸಮಾಜ ವ್ಯವಸ್ಥೆಗೆ ಬದಲಾಗಿ ಇನ್ನೂ ಉತ್ತಮವಾಗಿರಬಹುದಾದ ಸಮಾಜ ವ್ಯವಸ್ಥೆಯನ್ನು ರೂಪಿಸುವ ಬಗ್ಗೆ ಚಿಂತನೆ ನಡೆದಿದೆ. ಇವತ್ತಿನ ಸಮಾಜ ಭ್ರಷ್ಟವಾಗಿದೆ, ಜೀವನದಲ್ಲಿ ಅಗತ್ಯವಾಗಿರಬೇಕಾದ ಮಾನವೀಯ ಮೌಲ್ಯಗಳು ಕಳೆದುಹೋಗುತ್ತಿವೆ. ರಾಷ್ಟ್ರದ ಜನತೆಯ ಸಂತೋಷದ ಪ್ರಮಾಣವನ್ನು ಲೆಕ್ಕಹಾಕುವುದರ ಬದಲು ಜನರ ಧನ ಸಂಪಾದನೆಯ ಸಾಮರ್ಥ್ಯದ ಲೆಕ್ಕವನ್ನು ಹಾಕಲಾಗುತ್ತಿದೆ. ಅದರಿಂದಾಗಿ ಜನರಲ್ಲಿ "ದುಡ್ಡೇ ದೊಡ್ಡಪ್ಪ"ವಾಗುತ್ತಿದೆ. ಅಲ್ಲದೆ ಧರ್ಮಸಂಸ್ಥೆ ಮತ್ತು ಶಾಸನಸಂಸ್ಥೆ (ಸರಕಾರ) ಸಂಸ್ಥೆಗಳು ಮುಖ್ಯವಾಗುತ್ತಿವೆ. ಸಮಾಜದ ಈ ಪರಿಸ್ಥಿತಿಯನ್ನು ಬದಲಾಯಿಸಬೇಕೆಂಬ ಹಂಬಲ ಬಹಳ ಜನರಲ್ಲಿದೆ. ಈ ವಿಷಯವಾಗಿ ಅನೇಕ ಸಂಘ-ಸಂಸ್ಥೆಗಳು ಚಳವಳಿಗಳು ಕೆಲಸ ಮಾಡುತ್ತಿವೆ. ಇತ್ತೀಚಿಗೆ ಸಾಮಾಜಿಕ ಪರ್ಯಾಯ ವ್ಯವಸ್ಥೆಯ ಬಗ್ಗೆ ಚಿಂತನೆ ನಡೆಸಲು ಧಾರವಾಡದಲ್ಲಿ ಹಲವಾರು ಪ್ರಗತಿಪರವೆಂದು ಹೇಳಿಕೊಳ್ಳುವ ಸಂಘಟನೆಗಳು ಚಿಂತನಾ ಸಭೆಯನ್ನು ನಡೆಸಿದವು. ಪರ್ಯಾಯ ವ್ಯವಸ್ಥೆಯ ಬಗ್ಗೆ ಕಾಳಜಿ ಇರುವವರೆಲ್ಲರನ್ನು ಒಗ್ಗೂಡಿಸಿ "ಮಹಾಮೈತ್ರಿ"ಯೊಂದನ್ನು ಸ್ಥಾಪಿಸಲಾಗುವುದೆಂದು ಘೋಷಿಸಲಾಗಿದೆ. ದೇಶದ ಹಿತವನ್ನು ಬಯಸುವವರೆಲ್ಲರೂ ಮಹಾಮೈತ್ರಿಯನ್ನು ಸ್ವಾಗತಿಸಬೇಕು. ಆದರೆ ಇರುವ ಅಪಾಯವೇನೆಂದರೆ ಈ ಮಹಾಮೈತ್ರಿ ರಾಜಕಾರಣದ ಶುದ್ಧೀಕರಣದಲ್ಲಿ ತೊಡಗಿ ಕೊನೆಗೆ ಎಲ್ಲಿ ತಾನೇ ರಾಜಕೀಯ ಪಕ್ಷವಾಗಿ ಪರಿವರ್ತನೆಗೊಳ್ಳಬಹುದೆಂಬುದು. ಕೆಟ್ಟಿರುವ ಇಂದಿನ ಸಮಾಜ ವ್ಯವಸ್ಥೆಗೆ ಕಾರಣ ಧರ್ಮಸಂಸ್ಥೆ ಮತ್ತು ಶಾಸನಸಂಸ್ಥೆ. ದಿನ ಕಳೆದಂತೆ ಇವು ಬಲಿಷ್ಠವಾಗುತ್ತಾ ಹೋಗುತ್ತಿವೆ. ಎಲ್ಲಿಯವರೆಗೆ ಈ ಎರಡು ಸಂಸ್ಥೆಗಳಿಂದ ಸಮಾಜ ಬಿಡುಗಡೆ ಹೊಂದುವುದಿಲ್ಲವೋ ಅಲ್ಲಿಯವರೆಗೆ ಪರಿವರ್ತನೆ ಅಥವಾ ಪರ್ಯಾಯ ವ್ಯವಸ್ಥೆಯ ವಿಚಾರ ಗಗನಕುಸುಮವಾಗಿಯೇ ಉಳಿವುದು. ಯಾವುದೇ ಒಂದು ಸುಧಾರಿತ ವ್ಯವಸ್ಥೆ ನಿರ್ಮಾಣವಾಗಬೇಕಾದರೆ ಮುಖ್ಯವಾಗಿ ಜನರ ಗುಣವಿಕಾಸವಾಗಬೇಕು. ಗುಣವಿಕಾಸದ ಮೂಲಕವೇ ಮಾನವತೆ ಮುಂದುವರೆಯುವುದು. ಜನರಲ್ಲಿ ಗುಣವಿಕಾಸದ ಕೆಲಸವನ್ನು ಶಾಸನ ಸಂಸ್ಥೆಯಾಗಲೀ, ಧರ್ಮಸಂಸ್ಥೆಯಾಗಲೀ ಮಾಡಲಾರವು. ಹೇಗೆ ಮನುಷ್ಯನಿಗೆ ತನ್ನ ನಿದ್ರೆಯನ್ನು ತಾನೇ ಮಾಡುವುದರಲ್ಲಿ ಹಿತವಿದೆಯೋ ಅದೇ ರೀತಿ ಗುಣವಿಕಾಸದ ಕೆಲಸವನ್ನು ತಾನೇ ಸ್ವತಃ ಮಾಡಿಕೊಳ್ಳಬೇಕಾಗುತ್ತದೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ದಿವಂಗತ ಗಿರಿಜಾ ಕೌಲಗಿಯವರ ಆತ್ಮಕ್ಕೆ ಶಾಂತಿ ಕೋರಲು ಜೂನ್ ೧೦ ರಂದು ಆತ್ಮಶಾಂತಿ ಸಭೆಯನ್ನು ಹೊಸಜೀವನ ದಾರಿ ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು. ರಾಜ್ಯದ ವಿವಿಧ ಭಾಗಗಳಿಂದ ಸುಮಾರು ೩೦೦ ಸಹೃದಯಿ ಅಭಿಮಾನಿ ಮಿತ್ರರು ಸಭೆಯಲ್ಲಿ ಉಪಸ್ಥಿತರಿದ್ದರು. ಸಭೆಯು ಸಭಾಗುಡಿಸಿಲಿನಲ್ಲಿ ನಡೆಯಿತು. ಪ್ರಾರಂಭದಲ್ಲಿ ಸಾಮೂಹಿಕವಾಗಿ ವಿಷ್ಣುಸಹಸ್ರನಾಮವನ್ನು ಹೇಳಲಾಯಿತು. ನಂತರ ದಿವಂಗತರ ನೆನಪಿನಲ್ಲಿ ಆಲದ ಮರದ ಸಸಿಯೊಂದನ್ನು ಜನಪದ ಸೇವಾ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಜನಾರ್ಧನ್‌ರವರು ನೆಟ್ಟು ನೀರೆರೆದರು. ಪಕ್ಕಲ್ಲಿಯೇ ಗಿರಿಜಾ ಕೌಲಗಿಯವರ ಜನನ ಮತ್ತು ಮರಣದ ದಿನಾಂಕಗಳನ್ನು ಭಾರತೀಯ ಪಂಚಾಂಗ ಪದ್ಧತಿಯ ಪ್ರಕಾರ ಸೂಚಿಸುವ ಶಿಲಾ ಫಲಕವನ್ನು ಸ್ಥಾಪಿಸಲಾಯಿತು. ಸಭಿಕರೆಲ್ಲರೂ ಸಂತೋಷದಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ನಂತರ ನಡೆದ ಶಾಂತಿ ಸಭೆಯಲ್ಲಿ ಶ್ರೀ ವಿದ್ಯಾಶಂಕರ್‌ರವರು ಸಮಯೋಚಿತವಾದ ಮತ್ತು ಭಕ್ತಿಭಾವದ ಕೆಲವು ದೇವರ ನಾಮಗಳನ್ನು ಹೇಳಿದರು. ಶ್ರೀ ಮುರುಳಿ ಶೃಂಗೇರಿಯವರು ಆರ್ಧ ಭಾವನೆಯ ರಾಗವನ್ನು ಕೊಳಲಿನಲ್ಲಿ ಇಂಪಾಗಿ ನುಡಿಸಿದರು. ನಂತರ ಸಭಿಕರಲ್ಲಿ ಒಬ್ಬರಾದ ಮೇಲೆ ಒಬ್ಬರು ಪೈಪೋಟಿಯಂತೆ ಗಿರಿಜಾ ಕೌಲಗಿಯವರ ವ್ಯಕ್ತಿತ್ವದ ವಿವಿಧ ಮುಖಗಳ ಬಗ್ಗೆ ತಮ್ಮ ಅನುಭವಕ್ಕೆ ಬಂದ ವಿಷಯಗಳನ್ನು ತಿಳಿಸಿದರು. ಮಾತನಾಡ ಬಯಸುವವರ ಸಂಖ್ಯೆ ಇನ್ನೂ ಇತ್ತು. ಆದರೆ ಸಾಮೂಹಿಕ ಭೋಜನದ ಸಮಯ ಆಗಿದ್ದರಿಂದ ಶಾಂತಿ ಸಭೆಯನ್ನು ಶಾಂತಿ ಮಂತ್ರದಿಂದ ಮುಗಿಸಲಾಯಿತು. ಸಾಮೂಹಿಕ ಭೋಜನಾ ನಂತರ ಕಾರ್ಯಕ್ರಮ ಮುಗಿಯಿತು.

* * *

ಜನಪದ ಸೇವಾ ಟ್ರಸ್ಟಿನಲ್ಲಿ ತಯಾರಾಗುತ್ತಿರುವ ಖಾದಿಯನ್ನು "ಜನಪದ ಖಾದಿ" ಎಂದು ಕರೆಯಲಾಗಿದೆ. ಜನಪದ ಖಾದಿಗೆ ಉತ್ತಮ ಬೇಡಿಕೆಯಿದೆ. ಜುಲೈ ೨೦ ರಿಂದ ೨೪ರ ವರೆಗೆ ಚನ್ನೈನಲ್ಲಿ ನಡೆಯಲಿರುವ ಪ್ರದರ್ಶನದಲ್ಲಿ ಜನಪದ ಖಾದಿಯನ್ನು ಮಾರಲು ಕೆಲ ಯುವಕರು ಮುಂದೆ ಬಂದಿದ್ದಾರೆ.

ಸನ್ಮಾನ್ಯರಿಂದ....

ತಮ್ಮ ಪತ್ನಿ ತೀರಿಕೊಂಡ ವಿಷಯ ಇಂದಿನ ಪ್ರಜಾವಾಣಿ ಪತ್ರಿಕೆಯಲ್ಲಿ ಓದಿ ತುಂಬಾ ವಿಷಾದವಾಯಿತು. ಈ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ತಮಗೂ, ತಮ್ಮ ಕುಟುಂಬಕ್ಕೂ ದೇವರು ನೀಡಲೆಂದು ಪ್ರಾರ್ಥಿಸುತ್ತೇನೆ. **– ಎಸ್ ಚೆನ್ನಪ್ಪ – ಮೈಸೂರು**

* * *

ಮೊನ್ನೆ ದಿನ ವಿಚಾರ ತಿಳಿದು ಬೇಸರವಾಯಿತು. 'ಅಮ್ಮ'ನವರ ನಿಧನ ಸಾಮಾಜಿಕ ಕ್ಷೇತ್ರಕೊಂದು ನಷ್ಟ. ಮಕ್ಕಳಿಗೆ ಧೈರ್ಯ ಹೇಳಿ. ತಾವು ಧೈರ್ಯವಾಗಿರಿ. ವಿಷಾದದಿಂದ ಲೇಖನಿಯನ್ನು ನಿಲ್ಲಿಸುವೆ.

– ಮುಕುಂದ (ಪುರೋಹಿತ್) – ಬೆಂಗಳೂರು

* * *

ನನ್ನನ್ನು ತಮ್ಮ ಮಗನಂತೆ ಎಂದು ಕರೆದು ಗಿರಿಜಮ್ಮನವರು ನನ್ನ ಮನಸ್ಸಿಗೆ ಬಹಳ ಖುಷಿಯನ್ನುಂಟುಮಾಡಿದ್ದಾರೆ. ನಿಮ್ಮನ್ನು ಮತ್ತು ಗಿರಿಜಮ್ಮನವರನ್ನು ನಮ್ಮ ತಂದೆ ತಾಯಿಗಳಂತೆ ನಮ್ಮ ಮನೆಯಲ್ಲಿ ಸತ್ಕರಿಸಿ ನೋಡಿಕೊಳ್ಳವೆ ಎಂಬ ಬರವಸೆಯೊಂದಿಗೆ.

– ಪ್ರಾಣೇಶ್, ಸಂಧ್ಯಾ ಮತ್ತು ಶ್ರೀರಾಮ್ – ಬೆಂಗಳೂರು

(ಗಿರಿಜಮ್ಮನವರ ನಿಧನದ ಮೊದಲು ಬರೆದದ್ದು)

* * *

ವಿಷಯ ತಿಳಿಯಿತು. ಆತ್ಮಿಯೊಬ್ಬರನ್ನು ಕಳೆದುಕೊಂಡಂತೆ ಆಯಿತು. ಗಿರಿಜಮ್ಮನವರ ಸಾರ್ಥಕ ಬದುಕು, ತುಂಬುಜೀವನ. ಅದೊಂದು ಹಿರಿಯ ಚೇತನ. ನಮ್ಮೆಲ್ಲರಿಗೂ ಅವರು ಅಮ್ಮನ ಸಮಾನ. ಅವರ ಅಗಲಿಕೆಯಿಂದ ನೀವು ಹೊರಬರುತ್ತೀರಿ ಎಂಬ ವಿಶ್ವಾಸ ನನ್ನದು.

– ಆನಂದ್ – ಬೆಂಗಳೂರು

* * *

ಗಿರಿಜಮ್ಮ ಓರ್ವ ಉದಾತ್ತ ಆತ್ಮ. ನಮ್ಮ ತೀವ್ರತರ ಸಂತಾಪವನ್ನು ಸ್ವೀಕರಿಸಿ. **– ಎಂ ಕೆ ಸುಬ್ಬರಾವ್ – ಬೆಂಗಳೂರು**

* * *

ಊಳಿಗವ ಮಾಡುವರ ಹರಸುತ್ತ ಬಾ
ಒಲವ ಚೆಲ್ಲುವವರ ಅರಸುತ್ತ ಬಾ
ದಣಿವು ಹಸಿವುಗಳ ಅಳಿಸುತ್ತ ಬಾ
ಕಾಯಕವ ಒಪ್ಪುವನು ಬೆಳೆಸುತ್ತ ಬಾ
ಜನಪದದಡಿಯಾಳು ಕಸ್ತೂರಿ 'ಬಾ'
ಎತ್ತ ಹೋದಿಯೆ? ತಾಯಿ ಮತ್ತೆ ಬಾ

– ಚನ್ನಗಿರಿ ತಿರುಮಲರಾವ್ – ಬೆಂಗಳೂರು

* * *

ವಿಷಯ ತಿಳಿದು ಮನಸ್ಸಿಗೆ ಬಹಳ ಬೇಸರವಾಯಿತು. ಹಾಸಿಗೆ ಹಿಡಿಯದೆ, ಹೆಚ್ಚು ನರಳದೆ, ನಿರಾಯಾಸವಾಗಿ ಮುಕ್ತಿ ಸಿಕ್ಕಿರುವುದು ಸಮಾಧಾನದ ವಿಷಯ. ಗಿರಿಜಾ ಕೌಲಗಿ ಅವರ ಸರಳ ವ್ಯಕ್ತಿತ್ವವೆ ಕಣ್ಣಮುಂದೆ ಬಂದು ನಿಲ್ಲುತ್ತದೆ. ಅವರ ಆದರೋಪಚಾರ ಮರೆಯುವಂತಿಲ್ಲ. ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಜೀವನದಲ್ಲಿ ಸಾರ್ಥಕ್ಯವನ್ನು ಕಂಡುಕೊಂಡರು. ಅಂಗವಿಕಲ ಮಕ್ಕಳಿದ್ದ ಕಾಲದಲ್ಲಿ ಮಮತಾಮಯಿ ಗಿರಿಜಾರವರನ್ನು ನಾನು ಕಂಡಿದ್ದೇನೆ.

– ವೈದೇಹಿ – ಮೈಸೂರು

* * *

ಗಿರಿಜಾ ಕೌಲಗಿಯವರು ನಿಧನರಾದ ವಾರ್ತೆ ತಿಳಿದು ದುಃಖವಾಯಿತು. ಹುಟ್ಟಿದವರೆಲ್ಲ ನಿಧನರಾಗುವುದು ನಿಶ್ಚಿತವಾದರೂ ಕೆಲವರು ಸಮಾಜಕ್ಕೆ ತಾವು ಪಡೆದುದಕ್ಕಿಂತ ಹೆಚ್ಚು ಕೊಟ್ಟು ಹೋಗುತ್ತಾರೆ ಅಂಥಹ ಅಪರೂಪ ವ್ಯಕ್ತಿಗಳಲ್ಲಿ ಗಿರಿಜಮ್ಮನವರು ಒಬ್ಬರು.

– ಪ್ರಹ್ಲಾದ ಮಹಿಷಿ – ಬೆಂಗಳೂರು

* * *

ತಮ್ಮ ಧರ್ಮಪತ್ನಿ ಸ್ವರ್ಗಸ್ಥರಾದ ಬಗ್ಗೆ ಪತ್ರಿಕೆಯಲ್ಲಿ ಓದಿ ಮನಸ್ಸಿಗೆ ಖೇದವಾಯಿತು. ಅಮ್ಮನವರ ಕೈಯಲ್ಲಿ ನಾನು ಮತ್ತು ನನ್ನ ಸ್ನೇಹಿತರಾದ ಬಿಸಪ್ಪ ಗೌಡ, ಪ್ರಹ್ಲಾದರಾವ್, ಸ್ವೀಕರಿಸಿದ ಆಥಿತ್ಯ ಚಿರಸ್ಮರಣೀಯ.

– ಕೆ ವಿ ಶಂಕರಪ್ಪ – ಕೋಲಾರ್

* * *

೧೯೨೭ರ ನಮ್ಮ ಬಾಲ್ಯ. ನನಗೆ ಮತ್ತು ಎಮ್ ಎನ್ ಜಯರಾಮ್ ಮತ್ತು ಸಿ. ಶೆಲ್ವಪಿಳ್ಳೈ ಮತ್ತು ಸಂತೋಷ್ ಶ್ರೀ ಕೃಷ್ಣ ಕನ್ನಡ ಶಿಶುವಿಹಾರದಲ್ಲಿ ಓದುತ್ತಿದ್ದ ನೆನಪು. ಗಿರಿಜಾ ಮೇಡಂರವರ ಪಾಠ ಹೇಳಿಕೊಡುವ ಶೈಲಿ ಹಾಗೂ ಆಟದ ರೂಪದಲ್ಲಿ ಪಾಠ ಮತ್ತು ಪದ್ಯಗಳು ಎಲ್ಲ ಅಪರೂಪದ ಅನುಭವ. ನಂತರದ ದಿನಗಳಲ್ಲಿಯೂ ನಾವು ಜನಪದ ಸೇವಾ ಟ್ರಸ್ಟಿನ ಮಾರ್ಗದರ್ಶನದಲ್ಲಿ ಸರ್ವೋದಯ ಕ್ಯಾಂಪ್‌ಗಳಲ್ಲಿ ಭಾಗವಹಿಸುತ್ತಿದ್ದಾಗ ಕರುಣಾಗೃಹ ಮಕ್ಕಳಿಗೆ ಗಿರಿಜಮ್ಮನವರು ಸ್ವತಃ ಅಡಿಗೆ ಮಾಡುವುದು, ತಲೆ ಬಾಚುವುದು, ಊಟ ಬಡಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದುದ್ದನ್ನು ನೋಡಿದ್ದೆವು. ಯಾವ ಸಹಾಯಕರೂ ಆ ಕಾಲದಲ್ಲಿ ಇರಲಿಲ್ಲ. ಕರುಣಾಗೃಹ ಮಕ್ಕಳನ್ನು ನೋಡುತ್ತಿದ್ದ ರೀತಿ ಅವರ ದೊಡ್ಡತನವೇ ಆಗಿತ್ತು. ಸಜ್ಜನ ಮತ್ತು ಸರಳ ಜೀವಿ. ಒಂದು ದಿನವೂ ಆಡಂಬರದ ಅಂದರೆ ರೇಷ್ಮೆ ಸೀರೆಯನ್ನಾಗಲೀ, ಬಂಗಾರ ಅಥವಾ ಬೆಳ್ಳಿಯ ಮೋಹವಾಗಲೀ, ಅವರಲ್ಲಿ ಇರಲಿಲ್ಲ. ಒಂಟೆತ್ತಿನ ಗಾಡಿಯಲ್ಲಿ ಅಥವಾ ನಡೆದುಕೊಂಡು ಹೊಸ ಜೀವನ ದಾರಿಗೆ ಹೋಗುತ್ತಿದ್ದರು. ಅದನ್ನು ನಾ ಚೆನ್ನಾಗಿ ಬಲ್ಲೆ. ಹೀಗೆ ದಾದಾರವರ ಮಾರ್ಗದರ್ಶನದಂತೆ ಜೀವನ ಸಾಗಿಸಿ ಗಿರಿಜಾ ಮೇಡಂ ಇಹಲೋಕವನ್ನು ತ್ಯಜಿಸಿದರೂ ಪರಲೋಕದಿಂದ ನಮ್ಮೆಲ್ಲರಿಗೂ ಮಾರ್ಗದರ್ಶನ ನೀಡುತ್ತಿದ್ದಾರೆಂದು ಭಾವಿಸುತ್ತೇನೆ. ಶ್ರೀ ಯೋಗಾನರಸಿಂಹಸ್ವಾಮಿಯವರ ಅನುಗ್ರಹ ಅವರಿಗೆ ಆಗಲೆಂದೂ ಅವರ ಆತ್ಮಕ್ಕೆ ಶಾಂತಿ ಸಿಗಲೆಂದೂ ಪ್ರಾರ್ಥಿಸುತ್ತೇನೆ.

– **ಎಸ್ ನಾರಾಯಣ ಭಟ್ಟರ್**,ಅಧ್ಯಕ್ಷರು, ಗ್ರಾಮ ಪಂಚಾಯಿತಿ ಮೇಲುಕೋಟೆ

* * *

೮/೭/೨೦೧೬ ರಂದು ಶುಕ್ರವಾರ ಸಂಜೆ ೫ ಗಂಟೆಗೆ ಹಾಸನ ಜಿಲ್ಲೆ ಸರ್ವೋದಯಮಿತ್ರಮಂಡಲಿ ಸಭೆ ಮಂಜಪ್ಪ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ವರ್ಗಸ್ತರಾದ ಗಿರಿಜಾ ಕೌಲಗಿಯವರ ಜೀವನ ಆದರ್ಶಗಳನ್ನು ಹಾಗೂ ಇಡೀ ಕುಟುಂಬಕ್ಕೆ ೫೫ ವರ್ಷ ಹೇಗೆ ಶಕ್ತಿಯಾಗಿ ಬಾಳಿದರೆಂಬ ಬಗ್ಗೆ ಮಾತನಾಡಲಾಯಿತು. ಜನಪದ ವಿಚಾರದಲ್ಲಿ ಅವರ ಬಗ್ಗೆ ಬಂದಿರುವ ಲೇಖನವನ್ನು ಪೂರ್ಣವಾಗಿ ಓದಲಾಯಿತು. ಸ್ವಾತಂತ್ರ್ಯ ಹೋರಾಟಗಾರ ಎಚ್ ಎಮ್ ಶಿವಣ್ಣನವರು ಮಾತನಾಡಿ ಗೌರವ ಸಲ್ಲಿಸಿದರು. ನಂತರ ಎಲ್ಲರೂ ನಿಂತು ಒಂದು ನಿಮಿಷ ಮೌನಾಚರಣೆ ಆಚರಿಸಿದರು.

– **ಎಚ್ ಆರ್ ಮಂಜಪ್ಪಗೌಡ – ಹಾಸನ**

* * *

ಗಿರಿಜಾ ಕೌಲಗಿಯವರು ನನ್ನ ಮೊದಲ ಗುರು. ನನ್ನ ಅವರ ಸಂಬಂಧ ಅತ್ತೆ–ಸೊಸೆಯ ಸಂಬಂಧಕ್ಕಿಂತ ಗುರು–ಶಿಷ್ಯ ಸಂಬಂಧವೇ ಹೆಚ್ಚು ಮತ್ತು ಅರ್ಥಪೂರ್ಣವಾದುದ್ದು. ನನಗೆ ಅವರು ನನ್ನ ಐದು ವರ್ಷದ ಬಾಲ್ಯದಿಂದ ಐಯವತ್ತೈದು ವರ್ಷದ ನನಗೆ ಗುರುವಾಗಿ ಇದ್ದವರು. ನಾನು ಎಂದೂ ಅವರನ್ನು ಅತ್ತೆ, ಅಮ್ಮ ಎಂದು ಕರೆದವಳಲ್ಲ. "ಮೇಡಂ ಎಂದೇ ಕರೆಯುತ್ತಿದ್ದೆ." ಹೀಗೆ ಹೇಳುವಾಗ ನನ್ನ ಬಾಲ್ಯದ ನೆನಪು ಮರುಕಳಿಸುತ್ತದೆ. ಶ್ರೀಕೃಷ್ಣ ಶಿಶುವಿಹಾರಕ್ಕೆ ಬರಲು ಆರಂಭಿಸಿದಾಗ ಅವರು ಎಲ್ಲಾ ಮಕ್ಕಳಿಗೂ ತೋರುತ್ತಿದ್ದ ಪ್ರೀತಿ ಮತ್ತು ಆತ್ಮೀಯತೆ ನನ್ನ ಮನಸ್ಸಿನಲ್ಲಿ ಹಸಿರಾಗಿಯೇ ಉಳಿದಿದೆ. ಅವರು ಹೇಳಿಕೊಡುತ್ತಿದ್ದ "ಚಿಟ್ಟೆ ಚಿಟ್ಟೆ ಕೈಯಿಂದ ಬಿಟ್ಟೆ; ರೈಲು ಬಂತು ರೈಲು; ರೊಟ್ಟಿ ಅಂಗಡಿ ಕಿಟ್ಟಪ್ಪ" ಇಂಥ ಹತ್ತಾರು ಶಿಶು ಗೀತೆಗಳು ನನ್ನ ಮನದಲ್ಲಿ ಇನ್ನೂ ಸುಳಿಯುತ್ತಿವೆ. ಮಕ್ಕಳಿಗೆ ಸ್ನಾನ ಮಾಡಿಸಿ ತಲೆಬಾಚಿ ಮನೆಗೆ ಕಳುಹಿಸುತ್ತಿದ್ದರು. ಅವರಲ್ಲಿ ಮೇಡಂ ಎನ್ನುವ ದರ್ಪ ಇರಲಿಲ್ಲ. ಅವರು ಬಟ್ಟಲಲ್ಲಿ ಕೊಡುತ್ತಿದ್ದ ಊಟಕ್ಕಾಗಿ ಕಾಯುತ್ತಿದ್ದೆವು. ಮೇಡಂ ಜೊತೆ ಅಡುಗೆ ಮನೆಯಲ್ಲಿ ಕಾಲ ಕಳೆಯುತ್ತಿದ್ದೆ. ತಿಂಡ ತಿನಿಸುಗಳನ್ನು ಸವಿಯುತ್ತಿದ್ದೆ. ಅವರೊಡನೆ ಒಡನಾಟ ಹೆಚ್ಚುತ್ತಾ ಹೋಯಿತು. ಅವರು ಮಾಡುತ್ತಿದ್ದ ಕೆಲಸ ಕಾರ್ಯಗಳು ಸ್ಫೂರ್ತಿನೀಡಿದವು. ಹೀಗೆ ಬೆಳೆದ ನನ್ನನ್ನು ಅವರು ಸೊಸೆಯಾಗಿ ಸ್ವೀಕರಿಸಿದರು. ಹೀಗಾಗಿ ನಾನು ಒಳ್ಳೆಯ ಗಂಡ–ಮಕ್ಕಳನ್ನು ಪಡೆಯಲು ಅವರು ಕಾರಣರಾದರು. ಗಿರಿಜಾ ಅವರದ್ದು ಸರಳ ಜೀವನ. ಏನೇ ಆಗಲಿ ಈ ಒಂದು ಕುಟುಂಬ ಸಂಸ್ಥೆಯ ಮೂಲಕ ಹೆಮ್ಮರವಾಗಿ ಬೆಳೆಯಲು ಅವರು ಮಾಡುತ್ತಿದ್ದ ಅತಿಥಿ ಸತ್ಕಾರ ಹಾಗು ಮಾರ್ಗದರ್ಶನವೇ ಕಾರಣ. ಅವರು ನನಗೆ ಅತ್ತೆಯಾಗಿ, ತಾಯಿಯಾಗಿ, ಮೇಡಂ ಆಗಿ ದಾರಿದೀಪ ಆಗಿದ್ದರು.

– ಗೀತಾ ಕೌಲಗಿ (ಹಿರಿ ಸೊಸೆ) – ಮೇಲುಕೋಟೆ

* * *

ನಿಮ್ಮ ಮಡದಿ ಶ್ರೀಮತಿ ಗಿರಿಜಾ ಕೌಲಗಿ ಅವರ ನಿಧನದ ವಾರ್ತೆ ಕೇಳಿ ಅತೀವ ಸಂಕಟವಾಗಿದೆ. ನಿಮ್ಮ ಇಳಿ ವಯಸ್ಸಿನಲ್ಲಿ ಆಕೆಯ ನಿರ್ಗಮನದ ನೋವನ್ನು ಎದುರಿಸಲು ಭಗವಂತ ನಿಮಗೆ ಶಕ್ತಿ ಕೊಡಲಿ. ಜನಪದ ವಿಚಾರಕ್ಕೆ ಐದು ವರ್ಷದ ಚಂದಾ ಹಣ ಒಂದು ಸಾವಿರ ಕಳುಹಿಸಿದ್ದೇನೆ.

– ವೈ.ಜಿ. ಮುರುಳಿಧರನ್ – ಬೆಂಗಳೂರು

* * *

ಗಿರಿಜಮ್ಮನವರ ಮಮತೆಯ ಆಳವನ್ನು, ಸರಳ ಸ್ವಭಾವವನ್ನು, ಆದರದ ಆತಿಥ್ಯವನ್ನು ಕಂಡರಿಯುವ ಮತ್ತು ಅನುಭವಿಸುವ ಅವಕಾಶ ನನಗೆ ೨೦೦೮-೯ ರಲ್ಲಿ ನನ್ನ ಮಗ ವಿಕಾಸ್ ಹಾಗೂ ಸೊಸೆಯೊಂದಿಗೆ ಮೇಲುಕೋಟೆಗೆ ಬಂದಾಗ ಲಭಿಸಿತ್ತು. ಅಸಂಖ್ಯಾತರಿಗೆ ಅವರು ತಾಯಿಯಂತಾಗಿ ಮಾರ್ಗದರ್ಶನವಿತ್ತರು. ಪ್ರತಿಕ್ಷಣ ಸಾರ್ಥಕವಾಗಿ ಬದುಕಿದರು. ನಿಜವಾದ ಅರ್ಥದ ಸಮಾಜ ಸೇವಕಿಯಾಗಿ ಆದರ್ಶ ಪ್ರಯರಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

– ಜ್ಯೋತ್ಸ್ನಾ ಕಾಮತ್ – ಬೆಂಗಳೂರು

* * *

ತೀರಿಹೋಗಿರುವ ಗಿರಿಜಮ್ಮನವರು ನನಗೆ ಮಾತ್ರ ಅಜ್ಜಿ ಎಂದು ಅರಿತುಕೊಂಡಿದ್ದೆ. ಈ ಶಾಂತಿಸಭೆಯಲ್ಲಿ ಬಂದಿರುವವರೆಲ್ಲ ಅವರನ್ನು "ಅಮ್ಮ, ಅಮ್ಮ ಎನ್ನುವುದನ್ನು ಕೇಳಿದ ಮೇಲೆ ಗಲಿಬಿಲಿಗೊಂಡಿದ್ದೇನೆ. ನನ್ನ ಅಜ್ಜಿ ನಿಮ್ಮೆಲ್ಲರನ್ನು ಮಕ್ಕಳಂತೆಯೇ ನೋಡಿಕೊಳ್ಳುತ್ತಿದ್ದರೆಂಬುದನ್ನು ಕೇಳಿ ನನಗೆ ವಿಚಿತ್ರವಾದ ಅನುಭವವಾಗುತ್ತಿದೆ" ಎಂದು ಮೊಮ್ಮಗ ಸುಪ್ರಜ್ ಹೇಳಿದಾಗ ಉಪಸ್ಥಿತರೆಲ್ಲ ವಿಸ್ಮಿತಗೊಂಡರು. ಶಾಂತಿಸಭೆ ಸಮಯಕ್ಕೆ ಸರಿಯಾಗಿ ಪ್ರಾರಂಭಗೊಂಡು ೨:೩೦ ಗಂಟೆಗೆ ಮುಕ್ತಾಯಗೊಂಡಿತು.

ಗಿರಿಜಮ್ಮನವರ ಆತ್ಮಕ್ಕೆ ಶಾಂತಿ ದೊರಕುವಂತೆ ನೂರಾರು ವರ್ಷ ಪಕ್ಷಿಗಳಿಗೆ ಹಣ್ಣು ಕೊಡುವ, ನೆರಳು ಕೊಟ್ಟು ಆಶ್ರಯ ನೀಡುವ, ಆಲದ ಮರದಂತೆ ಅವರ ಬದುಕು ಇತ್ತೆಂಬುದನ್ನು ಸೂಚಿಸುವಂತೆ ಗಿರಿಜಮ್ಮನವರ ಅಂತ್ಯಸಂಸ್ಕಾರದ ಸ್ಥಳದಲ್ಲಿ ಆಲದ ಸಸಿಯನ್ನು ಜನಪದ ಸೇವಾಟ್ರಸ್ಟ ಅಧ್ಯಕ್ಷರಾದ ಜನಾರ್ಧನ್ ಸೇರಿದಂತೆ ಹಲವಾರು ಗಣ್ಯರು ನೆಟ್ಟು ನೀರೆರೆದರು. ತಮ್ಮ ಮಕ್ಕಳಾದ ಸಂತೋಷ್ ಮತ್ತು ಸುಘೋಷ್‌ರವರನ್ನು ಯಾವುದೇ ಪಕ್ಷಪಾತವಿಲ್ಲದೆ ಇತರ ಮಕ್ಕಳ ಜೊತೆಗೆ ಬೆಳೆಸಿದರು.

– ಅರ್ಜುನಪುರಿ ಅಪ್ಪಾಜಿಗೌಡ – ಮಂಡ್ಯ

* * *

ಇನ್ನೂ ಅನೇಕ ಆತ್ಮೀಯರು ದೂರವಾಣಿ ಸಂದೇಶದ ಮೂಲಕ ತಮ್ಮ ಸಂತಾಪವನ್ನು ಸೂಚಿಸಿದ್ದಾರೆ.

ನಾಲ್ಕೂ ನಿಟ್ಟಿನಿಂದ....

"ಗುಜರಾತಿನಲ್ಲಿ ದಲಿತರ ಮೇಲೆ ನಡೆದ ದಾಳಿ ದುರ್ದೈವವಾದ ಘಟನೆ. ಆದರೆ ಅಂಥ ದುರಾಚಾರಗಳು ನಡೆದುದು ಇದೆ ಮೊದಲಲ್ಲ ಅಂಥವುಗಳು ಈ ಮೊದಲೂ ನಡೆದಿವೆ"

– ರಾಜನಾಥ ಸಿಂಗ್– ಕೇಂದ್ರ ಗೃಹ ಮಂತ್ರಿ

ಎರಡು ತಪ್ಪುಗಳಿಂದ ಒಂದು ಸರಿ ಉತ್ತರವಾಗುವುದಿಲ್ಲ. ಒಳ್ಳೆಯ ನೆಪವಾಗುತ್ತವೆ, ಅಷ್ಟೆ.

ಟಿಪ್ಪಣಿ – ಥಾಮಸ್ ಸರ್ಭೂಜ್

ರಾಜಕೀಯ ಕಾರ್ಯಕರ್ತ ಜನರ ವಿಶ್ವಾಸವನ್ನು ಕಡ್ಡಾಯವಾಗಿ ಹೊಂದಿರಬೇಕು. ನೀವು ಆ ವಿಶ್ವಾಸಾರ್ಹತೆಯನ್ನು ಹೊಂದದೆ ಇದ್ದಲ್ಲಿ ರಾಜಕಾರಣದಲ್ಲಿರಲು ನಿಮಗೆ ಅಧಿಕಾರವಿಲ್ಲ.

– ಮಮತಾ ಬ್ಯಾನರ್ಜಿ
ಪಶ್ಚಿಮ್ ಬಂಗಾಲ ಮುಖ್ಯಮಂತ್ರಿ

ಮುಗ್ಧರ ನಂಬಿಕೆ ಸುಳ್ಳುಗಾರನ ಬಲಿಷ್ಠ ಉಪಯುಕ್ತ ಆಯುಧ.

ಟಿಪ್ಪಣಿ – ಸ್ಟೀಫಿನ್ ಕಿಂಗ್

ಗಂಗಾ ನದಿಯ ದಡದಲ್ಲಿರುವ ಸುಮಾರ ೧೪೪ ಚಿಕ್ಕಪುಟ್ಟ ಪಟ್ಟಣಗಳು ಪ್ರತಿದಿನ ಗಂಗೆಗೆ ೩೫೩ ದಶಲಕ್ಷ ಲೀಟರ್‌ನಷ್ಟು ಚರಂಡಿ ನೀರನ್ನು ಸೇರಿಸುತ್ತವೆ. ಇನ್ನು ದೊಡ್ಡ ನಗರಗಳು ದಿನಾಲೂ ೧೪ ಸಾವಿರ ಟನ್ ಘನ ತ್ಯಾಜ್ಯವನ್ನು ಉತ್ಪಾದಿಸುತ್ತದೆ.

– ಗಾರ್ಗಿ ಪರಸೈ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀಮತಿ ಭಾಗೀರಥಿಬಾಯಿ, – ಗೌಹಾತಿ

ನವೀಕರೀಸಿದ ಚಂದಾದಾರರು

ಶ್ರೀ ಎ. ವೀರಣ್ಣ, – ಸಂಡೂರು
ಶ್ರೀ ಎಂ. ಚಂದ್ರಶೇಖರಯ್ಯ, – ಭದ್ರಾವತಿ
ಶ್ರೀ ಅರ್ಜುನಪುರಿ ಅಪ್ಪಾಜಿಗೌಡ್ರು – ಮದ್ದೂರು
ಶ್ರೀಮತಿ ವೈದೇಹಿ, ಶ್ರೀ ಕೆ.ರಾಮಚಂದ್ರ – ಮೈಸೂರು
ಶ್ರೀ ವೈ. ಜಿ. ಮುರುಳೀಧರನ್, ಸುರೇಶ್ ಕಲಘಟಗಿ– ಬೆಂಗಳೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237